<dog2><Natural Sciences><Veterinary><1981><Book><ನಾಯಿ><ಬಿ. ಹರೀಶ್><19>

Page 22
ನಾಯಿಯ ಗುಣಗಳನ್ನು ಗಮನಿಸಿ ಮುಂದೆ ಮಾನವ ತನಗೆ
ಉಪಯುಕ್ತವಾಗುವಂತೆ ಅದಕ್ಕೆ ಅನೇಕ ವಿಧದಲ್ಲಿ ತರಬೇತಿ ಕೊಟ್ಟಿದ್ದಾನೆ. ಅದು
ಕಾಲಕ್ರಮೇಣ ಏರ್ಪಟ್ಟು
ಕಾಲಕ್ಕೆ ತಕ್ಕಂತೆ ಇರುತ್ತದೆ. ಒಂದೇ ಜಾತಿಯಲ್ಲೂ ಹಿಂದಿನ ಗುಣ ಇಂದು
#ಇರುವುದಿಲ್ಲ.
ಚರ್ಯೆ ಮತ್ತು ತೋರ್ಕೆಗಳೆರಡರಲ್ಲೂ ವ್ಯತ್ಯಾಸಗಳೇರ್ಪಟ್ಟಿವೆ - ಏರ್ಪಡುತ್ತಲೇ
ಇರುತ್ತವೆ.
ಯುದ್ಧನಾಯಿಗಳು ನೇರವಾಗಿ ಯುದ್ಧದಲ್ಲಿ ಕಾದಾಡಲು
ಭಾಗವಹಿಸದಿರಬಹುದು. ಆದರೆ ಯುದ್ಧಕಾಲದಲ್ಲಿ ಅದಕ್ಕೆ ಸಂಬಂಧಪಟ್ಟ ವಿವಿಧ
ಕಾರ್ಯಗಳಿಗೆ
ಬಳಸಲಾಗುತ್ತಿದ್ದುದರಿಂದ ಅವುಗಳಿಗೆ ಯುದ್ಧನಾಯಿಗಳೆಂದು ಹೆಸರು. ಅವುಗಳ
ಕತ್ತುಪಟ್ಟಿಗೆ ಸಮಾಚಾರ ವರದಿ ಬರೆದು ಕಟ್ಟಿ ಕಳುಹಿಸುತ್ತಿದ್ದರು. ಮೊದಲನೆಯ
ಮಹಾಯುದ್ಧ ಸಮಯದಲ್ಲಿ ಶಿಬಿರ ಕಾವಲಿಗೆ ಮತ್ತು ಶತ್ರುಗಳ ಇರುವನ್ನು ಪತ್ತೆ
ಹಚ್ಚಲು ಸೇನೆ ನಾಯಿಗಳನ್ನು ಬಳಸುತ್ತಿದ್ದರು.
ಕ್ರಿ.ಪೂ. ೨೮೦ ರಲ್ಲಿ ಪರ್ಗ್‌ಮಾನ್‌ನ ಒಂದು ಕಂಬದಲ್ಲಿ ದಪ್ಪ ತಲೆಯ ಗಿಡ್ಡ
ಬಲಿಷ್ಟ ಮುಸುಡುಗಳಿರುವ ನಾಯಿಗಳನ್ನು ಯುದ್ಧದಲ್ಲಿ ಬಳಸುವುದನ್ನು
ಚಿತ್ರಿಸಲಾಗಿದೆ. ಪೆರೆಂತಿ ಮತ್ತು ಪಯೋನಿಗಳ ನಡುವಣ ಯುದ್ಧವನ್ನು ವರ್ಣಿಸುತ್ತಾ
ಹೆರೆಡೋಟಸ್ "ಮನುಷ್ಯರನ್ನು ಮನುಷ್ಯರು, ಕುದುರೆಯನ್ನು ಕುದುರೆ,
ನಾಯಿಯನ್ನು ನಾಯಿ" ಎದುರಿಸಿತು ಎಂದು ವಿವರಿಸಿದ್ದಾನೆ. ಈ ಯುದ್ಧನಾಯಿಗಳಿಗೆ

ಮಂದವಾದ ಲೋಹ ಕವಚ ತೊಡಿಸಿ ದಟ್ಟವಾದ ದಪ್ಪ ಮೊನಚುತುದಿ ಮೇಕುಗಳನ್ನು ಸುತ್ತಲೂ ಹರಡಿದಂತೆ ಹೊಂದಿರುವ ಲೋಹ ಕತ್ತುಪಟ್ಟಿಯನ್ನು ಕಟ್ಟುತ್ತಿದ್ದರು. ಈ

Page 23

ನಾಯಿಗಳು ಕ್ರೂರ ಸ್ವಭಾವದವು. ಜೀವದ ಮೇಲಣ ಹಂಗುತೊರೆದು ಅತ್ತಿತ್ತ ಓಡಾಡಿ, ನಾಯಿ, ಕುದುರೆ, ಮನುಷ್ಯರ ಮೇಲೆರಗುತ್ತಿದ್ದವು. ಅವುಗಳ ಲೋಹ ಕವಚ ಅದಕ್ಕೆ ರಕ್ಷಣೆಯೀಯುತ್ತಿತ್ತು. ಆದರೆ ಅವುಗಳ ಕತ್ತುಪಟ್ಟಿ ಮೇಕುಗಳು ಪ್ರಾಣಿಗಳಿಗೆ ಮತ್ತು ಮನುಷ್ಯರಿಗೆ ಅತ್ಯಧಿಕ ಗಾಯಮಾಡುತ್ತಿದ್ದವು. ರೋಮನರ ಕಾಲದಲ್ಲಿ ಈ ಬಳಕೆ ಇನ್ನೂ ಹೆಚ್ಚಾಗಿತ್ತು. ಶೇಕ್ಸ್‌ಪೀಯರ್ ತನ್ನ "ಜೂಲಿಯಸ್ ಸೀಸರ್" ನಾಟಕದಲ್ಲಿ ಮಾರ್ಕ್ ಆಂಟೋನಿ "ಯುದ್ಧನಾಯಿಗಳನ್ನು ಬಿಚ್ಚಿ ಬಿಡು" ಎಂದು ಆ ಕಾಲದ ಬಳಕೆಯನ್ನು ವಿವರಿಸಿದ್ದಾನೆ. ಯುದ್ಧದಲ್ಲಿ ನಾಯಿಗಳನ್ನು ಬಳಸುವುದು ೧ ನೇ ರಾಣಿ ಎಲಿಜಬೆತ್ ಕಾಲದವರೆಗೂ ಇತ್ತೆಂದು ಕಂಡುಬರುತ್ತದೆ. ೮ ನೇ ಹೆನ್ರಿದೊರೆ ೪೦೦ ಯುದ್ಧನಾಯಿಗಳನ್ನು ಸ್ಪೆಯಿನಿನ ೫ ನೇ ಚಾರ್ಲ್ಸ್ ರಾಜನಿಗೆ ಕಳುಹಿಸಿದನೆಂದೂ, ಮತ್ತು ೧ ನೇ ರಾಣಿ ಎಲಿಜಬೆತ್, ಅರ್ಲ್ ಆಫ್ ಎಸ್ಸೆಕ್ಸ್‌ಗೆ ಯುದ್ಧಕ್ಕಾಗಿ ೧೦೦ ನಾಯಿಗಳನ್ನು ಕಳುಹಿಸಿದ ದಾಖಲೆಯಿದೆ.

ಕೊಲಂಬಸ್ ಮತ್ತು ಇತರರು ಇಂಡಿಯನ್‌ರನ್ನು ಕೊಲ್ಲಲು ಮತ್ತು ಹೆದರಿಸಲು ಕ್ರೂರ ನಾಯಿಗಳನ್ನೇ ಬಳಸಿದ್ದರು. ಇವು ಯುದ್ಧ ನಾಯಿಗಳೇ. ಕೊಲಂಬಸ್ ಜಮೈಕಾದ ಮಾಂಟಿಗೋ ಕೊಲ್ಲಿಯ ದಡ ತಲುಪಿದಾಗ ನಾಯಿಗಳನ್ನು ಬಿಚ್ಚಿಬಿಟ್ಟನೆಂದೂ, ಅವುಗಳಿಗೆ ಮನುಷ್ಯ ಮಾಂಸಾಹಾರವನ್ನೇ ಕೊಟ್ಟು ಪಳಗಿಸಿದ್ದರಿಂದ ಅವು

ಇಂಡಿಯನ್ನರನ್ನು ಅಟ್ಟಿಸಿ ಕೊಂದವೆಂದೂ, ಒಂದು ನಾಯಿ ಸುಮಾರು ೧೦ ಜನರಿಗೆ ಸಮವಾಗಿತ್ತೆಂದೂ, ಕೊಲಂಬಸ್ ಜೊತೆಯಲ್ಲಿದ್ದ ಲಾಸ್ ಕಾಸಸ್ ವರದಿಮಾಡಿದ್ದಾನೆ. ಫ್ರೆಡರಿಕ್ ದಿ ಗ್ರೇಟ್, ನೆಪೋಲಿಯನ್ ಮುಂತಾದವರು ತಮ್ಮ ಯುದ್ಧಗಳಲ್ಲಿ ನಾಯಿಗಳನ್ನು ಬಳಸಿದ್ದಾರೆ. ಜರ್ಮನ್‌ರು ಮತ್ತು ರಷ್ಯನರು ಇದಕ್ಕೆ ಯಾವಾಗಲೂ

ಹೆಚ್ಚು ಗಮನವಿತ್ತಿದ್ದಾರೆ. ನೇರ ಹೋರಾಟಕ್ಕಲ್ಲದಿದ್ದರೂ ಕಾವಲಿಗೆ, ಪತ್ತೆ ಹಚ್ಚಲಿಕ್ಕೆ ಮತ್ತು ಮಾಹಿತಿ ಕಳುಹಿಸಲು ಇವು ಬಹು ಉಪಯುಕ್ತವಾಗಿದ್ದವು. ಮೊದಲನೇ ಮಹಾಯುದ್ಧ ಸಮಯದಲ್ಲಿ ಮೆಷಿನ್‌ಗನ್ ಮತ್ತು ಫಿರಂಗಿಗಳನ್ನು ಎಳೆದೊಯ್ಯಲು ನಾಯಿಗಳೇ ಉಪಯುಕ್ತವಾದವು. ಗಾಯಗೊಂಡ ಯೋಧರನ್ನು ಪತ್ತೆಹಚ್ಚಲೂ ಅಲ್ಲಿಗೆ ಔಷಧ ತರಲೂ ನಾಯಿಗಳೇ ಸಹಾಯಕವಾದದ್ದು. ಇವುಗಳಿಗೆ "ರೆಡ್‌ಕ್ರಾಸ್" ನಾಯಿಗಳೆಂದೇ ಹೆಸರಿಡಲಾಗಿತ್ತು. ಹಿಮಾವೃತ ಪ್ರದೇಶಗಳಲ್ಲಂತೂ ಜಾರುಬಂಡಿಗಳನ್ನು ಅಲ್ಲಲ್ಲಿ ಎಳೆದೊಯ್ಯಲು ನಾಯಿಗಳಿಗೆ ಮಾತ್ರ ಸಾಧ್ಯವಾಗಿತ್ತು.
ಆಲ್ಸೇಷಿಯನ್
ಮತ್ತು ಡೋಬರ್‌ಮಾನ್‌ಗಳೇ ಇದರಲ್ಲಿ ಮುಖ್ಯ ಜಾತಿಗಳು. ಹಿಮಾವೃತ ಪ್ರದೇಶದಲ್ಲಿ ಹಸ್ಕಿಗಳು ಮುಖ್ಯವಾಗಿದ್ದವು. ಸಣ್ಣ ಜಾತಿಯವೂ ಕೆಲವು ಸಮಯ ಉಪಯುಕ್ತವಾದವು. ಸ್ಮೋಕೀ ಎಂಬ ಯಾರ್ಕ್‌ಷೈರ್ ಟೆರಿಯರ್ ೭೦ ಅಡಿ ಉದ್ದದ ೮ ಅಂಗುಲ ಅಗಲ ಪೈಪಿನೊಳಗೆ ದೂರವಾಣಿಯ ಕಂಬಿಗಳನ್ನು
ಎಳೆದೊಯ್ಯಲು
ನೆರವಾಗಿತ್ತು!
ಸುಮಾರು ೫೦೦೦ ವರ್ಷಗಳ ಹಿಂದಿನಿಂದಲೂ ಶೀತವಲಯದ ಹಿಮಾವೃತ



ಪ್ರದೇಶಗಳಲ್ಲಿ ಸಾಮಾನುಸಾಗಿಸುವ ಜಾರುಬಂಡಿಗಳನ್ನು ಎಳೆಯಲು ನಾಯಿಗಳೇ ಮುಖ್ಯ. ಇಂದಿಗೂ ಇವುಗಳೇ ಈ ಕಾರ್ಯವೆಸಗುತ್ತಿರುವುವು. ಬೆಲ್ಜಿಯಂ ಮತ್ತು ಯೂರೋಪಿನ ಕೆಲವೆಡೆಗಳಲ್ಲಿ ಮಾರುಕಟ್ಟೆಗೆ ಸಾಮಾನು ಕೊಂಡೊಯ್ಯುವ ಗಾಡಿಗಳಿಗೆ ನಾಯಿಯನ್ನೇ ಕುದುರೆ ಅಥವಾ ಎತ್ತುಗಳಂತೆ ಕಟ್ಟುತ್ತಾರೆ. ಇವುಗಳು ದಪ್ಪಗಾತ್ರದ ಬಲಿಷ್ಟನಾಯಿಗಳು. ಅಧಿಕ ಸಹಿಷ್ಣುತೆಯುಳ್ಳವು.
ಆಲ್ಸೇಷಿಯನ್ ಮತ್ತು ಡಾಬರ್‌ಮಾನ್‌ಗಳು ಉತ್ತಮ ಕಾವಲು ನಾಯಿಗಳೆನಿಸಿವೆ. ಕುರಿ ಕಾಯುವ ಕಾಲೀ ಮತ್ತು ಆಲ್ಸೇಷಿಯನ್‌ಗಳು ಅತ್ಯುತ್ತಮವಾದ

ಉನ್ನತ
ಶಿಕ್ಷಣ ಪಡೆದವು. ತಮ್ಮ ಯಜಮಾನನ ಕುರಿಗಳನ್ನು ಗುರುತಿಸಿ ಅವುಗಳನ್ನು ಎಚ್ಚರದಿಂದ ಇತರವುಗಳಿಂದ ಬೇರ್ಪಡಿಸಿ ಓಡಿಸಿ ತಂದು ಅದರ ರೊಪ್ಪದಲ್ಲಿ ಸೇರಿಸಲು
ಸಮರ್ಥವಾದವು. ಮನೆ ಕಾವಲಿಗೂ ನೆಚ್ಚಿಗೆಯ ನಾಯಿಗಳಿವು.
ಬೇಟೆನಾಯಿಗಳು ದೃಷ್ಟಿಗೋಚರ ಜಿಂಕೆ, ಮೊಲ ಮುಂತಾದವನ್ನು ಅಟ್ಟಿ ಹಿಡಿಯಬಲ್ಲ ದಪ್ಪಗಾತ್ರದ ಹೌಂಡ್‌ಗಳಾಗಿರಬಹುದು. ಬಂದೂಕ ಶಿಕಾರಿಗೆ ಅನುಕೂಲವಾಗಿರುವ ಪಾಯಿಂಟರ್, ಸೆಟ್ಟರ್ ಅಥವಾ ರಿಟ್ರೀವರ್‌ಗಳಾಗಿರಬಹುದು. ಡಾಲ್ಮೇಷಿಯನ್, ಟೆರಿಯರ್ ಮುಂತಾದವು ನರಿ, ಮೊಲ, ರಕೂನ್ ಪ್ರಾಣಿ ಬೇಟೆಗೆ. ಬಿಲ ನುಗ್ಗಿ ಹೊರ ಹೊರಡಿಸಲು ಅಥವಾ ಸಾಯಿಸಲು ಅನುಕೂಲವಾದವು. ಮಾಸ್ಟಿಫ್ ಮುಂತಾದವು ಹಂದಿ ಬೇಟೆಯಾಡಬಲ್ಲವು.
"ಕುರುಡರ ಕಣ್ಣು" ಕುರುಡರು ಹೊರಗೆ ಸುತ್ತಾಡಲು ನೆರವಾಗುವ ಅತಿ ಬುದ್ಧಿವಂತ ನಾಯಿಗಳು. ಅವುಗಳು ಸ್ವಲ್ಪ ಮೈಮರೆತರೂ ಹೆಚ್ಚು ಅಪಾಯ ಸಂಭವಿಸಬಹುದು. ಅಂತಹ ಅಚಾತುರ್ಯಗಳಾದ ದಾಖಲೆಗಳಿಲ್ಲದಿರುವುದೇ ಈ ನಾಯಿಗಳ
ವೈಶಿಷ್ಟ್ಯ.
ಸರ್ಕಸ್ ಮತ್ತು ಸಿನಿಮಾ ನಾಯಿಗಳಿಗೆ ಜಾತಿ ಮುಖ್ಯವಲ್ಲ. ತರಬೇತಿ ಮುಖ್ಯ. ಆದರೆ ಪೂಡಲ್ ಮುಂತಾದವು ಅತಿ ಬುದ್ಧಿವಂತಿಕೆಯವಾದ್ದರಿಂದ ವಿವಿಧ ಚಮತ್ಕಾರ ಪ್ರದರ್ಶನ ಮಾಡಲು ಕಲಿತಿರುತ್ತವೆ. ಮೊದಲನೇ ಮಹಾಯುದ್ಧ ಅಂತ್ಯ ಸಮಯದಲ್ಲಿ ಫ್ರೆಂಚರು ಜರ್ಮನರ ಕೆಲವು ಪ್ರದೇಶವನ್ನು ಆಕ್ರಮಿಸಿದರು. ಅಲ್ಲಿದ್ದ ಒಂದು ಕಂದಕದಲ್ಲಿ ಒಂದು ಹೆಣ್ಣು ಆಲ್ಸೇಷಿಯನ್ ಮರಿ ಹಾಕಿದ್ದು ಕಾಣಿಸಿತು. ಅದರ ಒಂದು ಮರಿ ಮುಂದೆ ರಿನ್-ಟಿನ್-ಟಿನ್ ಎಂಬ ಹೆಸರಿನಿಂದ ಲೋಕ ಪ್ರಸಿದ್ಧವಾಯಿತು. ಸ್ಮೋಕಿ ಮತ್ತು ಜೂನಿಯಾ ಮುಂತಾದವೂ ನಟಿಸಿವೆ. ಜಾನ್

ಹೋಮ್ಸ್ ಎಂಬಾತ ಅನೇಕ ಸಿನಿಮಾಗಳಲ್ಲಿ ನಟಿಸಿರುವ ನಾಯಿಗಳನ್ನು ತರಬೇತಿ ಮಾಡಿರುತ್ತಾನೆ. ನೇವ್ ಆಫ್ ಹಾರ್ಟ್ಸ್; ಬ್ಯಾರಟ್ಸ್ ಆಫ್ ವಿಂಪೋಲ್ ಸ್ಟ್ರೀಟ್; ಲಕ್ಕಿ ಜಿಮ್ ನೆವರ್ ಟೇಕ್ ಸ್ವೀಟ್ ಫ್ರಂ ಎ ಸ್ಟ್ರೇಂಜರ್; ಮತ್ತು ಇನ್ನೂ ಅನೇಕ ಚಿತ್ರಗಳಲ್ಲಿ ನಾಯಿಗಳು



ನಟಿಸಿವೆ. ವಾಲ್ಟ್‌ಡಿಸ್ನಿಯ ಲೇಡಿ ಅಂಡ್ ದಿ ಟ್ರಾಂಪ್; ಹಂಡ್ರೆಡ್ ಎಂಡ್ ಒನ್ ಡಾಲ್ಮೇಷಿಯನ್ ಮುಂತಾದ ವರ್ಣರಂಜಿತ ಚಿತ್ರಗಳಲ್ಲಿ ನಾಯಿಜೀವನವೇ ಮುಖ್ಯ ವಸ್ತು. ಆತನ ಹಾಸ್ಯ ಚಿತ್ರಗಳಲ್ಲಿ ಪ್ಲೂಟೋ ಎಂಬ ಮಂಕು ನಾಯಿ ನಾಯಕ!

ಭಾರತದಲ್ಲೂ ನಾಯಿಗಳು ನಟಿಸಿರುವ ಹಿಂದೀ, ತಮಿಳು, ತೆಲುಗು, ಕನ್ನಡ ಮತ್ತು ಮಲೆಯಾಳಂ ಚಲನ ಚಿತ್ರಗಳು ಅನೇಕವಿವೆ.

ನಾಯಿ "ಐಶ್ವರ್ಯವಂತನ ಪಾಲಕ ಮತ್ತು ಬಡವನ ಸ್ನೇಹಿತ; ಕೊನೆಯವರೆಗೂ ನೆಚ್ಚಿಕೆಯಿಂದಿರುವ ಏಕೈಕ ಜೀವಿ" ಎಂದು ಜಾರ್ಜ್ ಕ್ರಾಬ್ ವಿವರಿಸಿದ್ದಾರೆ.

ಪ್ರಾಣತೆತ್ತು ಒಡೆಯನನ್ನು, ಅವನ ಕುಟುಂಬದವರನ್ನು ಪಾಲಿಸಲು ಹಿಂತೆಗೆಯಲಾರದವು. ಫೀಡೋ ಎಂಬ ಒಂದು ಇಟಲಿಯ ೧೭ ವರ್ಷದ ರೋಗಪೀಡಿತ ಮುದಿನಾಯಿಗೆ ತನ್ನ ಒಡೆಯ ಯುದ್ಧ ಸಮಯದಲ್ಲಿ ಸತ್ತನೆಂಬುದು ತಿಳಿದಿರಲಿಲ್ಲ. ದಿನವೂ ಬಸ್ ನಿಲ್ದಾಣಕ್ಕೆ ಹೋಗಿ ಒಡೆಯ ಹಿಂದಿನಂತೆ ಬರುವನೆಂದು ಕಾದು ಬಾರದಿರುವಾಗ ವ್ಯಸನದಿಂದ ಮಂದಗಾಲಿಟ್ಟು ಮನೆಗೆ ಹಿಂತಿರುಗುವ ದೃಶ್ಯವನ್ನು ಸಹಸ್ರಾರು

ಜನ ನೋಡಿ ಕಣ್ಣೀರು ಸುರಿಸಿದ್ದಾರೆ. ಕೊನೆಯವರೆಗೂ ಹಾಗೇ ಮಾಡಿ ಅದು ಸತ್ತಿತು.
ದೇಶದ ಉನ್ನತ ಸೈನಿಕ ಪದಕವನ್ನು ಸರಕಾರ ಅದಕ್ಕೆ ಕೊಟ್ಟಿದೆ!
ವೈದ್ಯಕೀಯ ಸಂಶೋಧನೆಗಳಲ್ಲೂ ನಾಯಿಗಳ ಪಾತ್ರ ಮುಖ್ಯವಾಗುತ್ತಿದೆ.
ರಷ್ಯದ ಖ್ಯಾತಿವೆತ್ತ ಶರೀರ ಶಾಸ್ತ್ರಜ್ಞ ಐವಾನ್ ಪವ್‌ಲೋವ್ ನಿಯಮಾಧೀನ ಪ್ರತಿಕ್ರಿಯೆ ಸಂಶೋಧನೆಗಳಲ್ಲಿ ನಾಯಿಯನ್ನೇ ಬಳಸಿದ್ದ. ಮಧು ಮೂತ್ರ ವ್ಯಾಧಿಗೆ ಅಗತ್ಯವಾಗುವ ಇನ್‌ಸುಲಿನ್ ಪತ್ತೆಹಚ್ಚುವಲ್ಲೂ ಇದರ ಪಾತ್ರ ಮುಖ್ಯವಾಗಿತ್ತು. ಮೆತುಮೂಳೆ ರೋಗಕ್ಕೆ ಕಾರಣವನ್ನು ಕಂಡುಹಿಡಿಯಲು ಗ್ರೇಟ್‌ಡೇನ್ ನಾಯಿ ಮರಿಗಳು ಸಹಾಯಕವಾದವು. ಮಾನವರಲ್ಲಿ ಆಹಾರ ನ್ಯೂನತೆಯಿಂದುಂಟಾಗುವ "ಪೆಲ್ಲಾಗ್ರಾ" ರೋಗಕ್ಕೂ ಪರಿಹಾರ ದೊರಕಿದ್ದು ನಾಯಿಗಳ
ಮೇಲಿನ ಪ್ರಯೋಗ ಫಲಿತಾಂಶಗಳಿಂದಲೇ.
ಪ್ಯಾರಾಚೂಟ್‌ಗಳ ಸಹಾಯದಿಂದ ವಿಮಾನದಿಂದ ಕೆಳಕ್ಕೆ ಇಳಿದ ಪ್ರಾಣಿಗಳಲ್ಲಿ ನಾಯಿಯೇ ಮೊದಲನೆಯದು. ಬಾಹ್ಯಾಕಾಶ ಯಾನದಲ್ಲೂ ಪ್ರಾಣಿಗಳಲ್ಲಿ ನಾಯಿಗಳೇ ಪ್ರಪ್ರಥಮ ಪಾತ್ರ ವಹಿಸಿದವು. ೧೯೫೭ ನೇ ನವೆಂಬರ್ ಮೂರರಂದು ೨ ನೇ ಸ್ಪುಟ್ನಿಕ್ಸಲ್ಲಿ ಬಾಹ್ಯಾಕಾಶ ಯಾನಕ್ಕೆ ತೆರಳಿದ ಹೆಣ್ಣುನಾಯಿ "ಲೈಕಾ" 1050 ಮೈಲಿ ಎತ್ತರ ಹೋಗಿ ನಾಶ ಹೊಂದಿತು. ಸ್ಪಿಟ್ಸ್ ಜಾತಿಯ ಇನ್ನೆರಡು ಸಣ್ಣ ನಾಯಿಗಳು ಸ್ಟ್ರೆಲ್ಕಾ ಮತ್ತು ಬೆಲ್ಕಾ ಆಗಸ್ಟ್ ೧೯೬೦ ರಲ್ಲಿ ಬಾಹ್ಯಾಕಾಶ ಯಾನಮಾಡಿ, ಭೂಗ್ರಹವನ್ನು ೧೭ ಸಲ ಸುತ್ತುವರೆದು ಸುರಕ್ಷಿತವಾಗಿ ಭೂಮಿಗೆ ಹಿಂತಿರುಗಿದವು. ಈ ಎಲ್ಲಾ ಪ್ರಯತ್ನಗಳಿಗೂ ರಷ್ಯನ್ನರೇ ಕಾರಣ.



## ಅಧ್ಯಾಯ ೨

## ಭಾರತದಲ್ಲಿ ನಾಯಿ

### ೧. ವೇದ ಪುರಾಣಗಳಲ್ಲಿ ನಾಯಿ

ಹಿಂದೆ ಭಾರತದಲ್ಲಿ ನಾಯಿಗೆ ಹೆಚ್ಚಿನ ಪ್ರಾಶಸ್ತ್ಯವಿತ್ತೆಂದು ಕಾಣುತ್ತದೆ.

ಋಗ್ವೇದದಲ್ಲಿ ಅವುಗಳ ಅನೇಕ ಕಥೆ ಹಾಗೂ ವರ್ಣನೆಗಳಿವೆ. ಅದರಲ್ಲಿ "ಸರಮ" ಕಥೆ ಮುಖ್ಯವಾದದ್ದು. ಸರಮ ಇಂದ್ರ ಮತ್ತು ದೇವತೆಗಳಿಗೆ ಅಚ್ಚುಮೆಚ್ಚಿನ ಹೆಣ್ಣು ನಾಯಿ. ವಾಲ ಎಂಬ ಅಸುರನ ಅನುಯಾಯಿಗಳಾದ ಪಾನಿ (ಪ್ರಾಣಿ) ಗಳು ಬೃಹಸ್ಪತಿಯ ಹಸುಗಳನ್ನು ಕದ್ದೊಯ್ದಾಗ ಅವುಗಳನ್ನು ಪತ್ತೆಹಚ್ಚಲು ಸರಮಯನ್ನು ಕಳುಹಿಸಿದರು. ಸರಮ ಒಂದು ದೊಡ್ಡ ನದಿಯನ್ನು ದಾಟಿ ವಾಲನ ಸ್ಥಳ ಸೇರಿ ಕದ್ದ ಹಸುಗಳನ್ನು ಪತ್ತೆ ಹಚ್ಚಿತು. ಅದರ ಸ್ನೇಹ ಸಂಪಾದಿಸಲು ಮತ್ತು ತಮ್ಮೊಡನೆ ಇರಿಸಿಕೊಳ್ಳಲು ಪಾನಿಗಳು ಮಾಡಿದ ಪ್ರಯತ್ನಗಳೆಲ್ಲಾ ವಿಫಲವಾಗಿ ದೇವತೆಗಳು ತಮ್ಮ ಹಸುಗಳನ್ನು ಹಿಂದಕ್ಕೆ ಪಡೆದರು. ಇದರಲ್ಲಿ ಸರಮೆಯ ಸ್ವಾಮಿನಿಷ್ಠೆಯನ್ನು ವಿವರಿಸಲಾಗಿದೆ. ಸರಮ ಒಂದು ದೇವಸೂನಿ. ಅವಳಿಗೆ ಇದ್ದ ಇಬ್ಬರು ಮಕ್ಕಳು (ಮರಿ) ಯಮನ ಪ್ರೀತಿಗೆ ಪಾತ್ರರಾಗಿದ್ದ ಶ್ಯಾಮ ಮತ್ತು ಶಬಲ. (ಇವು ರಾತ್ರಿ ಮತ್ತು ಹಗಲು ಎಂದು ಕಥಾ ಸಂಹಿತದಲ್ಲಿ ವಿವರಿಸಲಾಗಿದೆ). ಇವುಗಳೆಲ್ಲಕ್ಕೂ ೪ ಕಣ್ಣುಗಳಿದ್ದು ಅತಿ ತೀಕ್ಷ್ಣ ಬುದ್ಧಿಯುಳ್ಳವುಗಳೆಂದು ವಿವರಿಸಲ್ಪಟ್ಟಿದೆ.

ಅವು ಅತಿ ನೆಚ್ಚಿಕೆಯ ಮತ್ತು ಎಚ್ಚರಿಕೆಯ ಉತ್ತಮ ಕಾವಲುಗಾರರೆಂದೂ ತಮ್ಮ ೪ ಕಣ್ಣುಗಳ ತೀಕ್ಷ್ಣ ದೃಷ್ಟಿಯಿಂದ ಮಾತ್ರವಲ್ಲದೆ, ವಾಸನೆ ಮತ್ತು ಶಬ್ದಗಳನ್ನನುಸರಿಸಿಯೂ ಅತಿ ವೇಗವಾಗಿ ಹಿಂಬಾಲಿಸುವ ಶಕ್ತಿಯುಳ್ಳವೆಂದೂ ಋಗ್ವೇದದಲ್ಲಿ
ವಿವರಿಸಲಾಗಿದೆ.

ಶ್ರದ್ಧಾ ಭಕ್ತಿಯಿಂದ ಬಾಳಿದವರು ಸತ್ತಾಗ ಅವರ ಆತ್ಮವನ್ನು ಸ್ವರ್ಗದ ಬಾಗಿಲಿನವರೆಗೆ ಕರೆದೊಯ್ಯುವ ಮಾರ್ಗದರ್ಶಕಗಳು; ಅವುಗಳನ್ನು ಇತರರಿಗೆ ಪಾರಿತೋಷಕವಾಗಿ ಕೊಡಬಹುದು; ದುರ್ಭಿಕ್ಷದ ಅತಿ ಕಠಿಣ ಸಮಯಗಳಲ್ಲಿ ನಾಯಿಯ
ಮಾಂಸವನ್ನು ತಿನ್ನಬಹುದೆಂದೂ ಕೂಡ ಋಗ್ವೇದ ವಿವರಿಸುತ್ತದೆ. ಅದರಿಂದಲೇ ಸತ್ತವರ ದೇಹಕ್ರಿಯೆಯ ಸಮಯದಲ್ಲಿ ಯಮನ ಎರಡು ನಾಯಿಗಳ ಹೆಸರನ್ನು

ಮಂತ್ರದಲ್ಲಿ ಉಚ್ಚರಿಸಲಾಗುತ್ತದೆ.

ಯಜುರ್ವೇದದಲ್ಲಿ ನಾಯಿಗಳ ದೇವನಾದ ರುದ್ರ, ಅವುಗಳಿಗೂ ಹಾಗೂ ಎಲ್ಲಾ ವಿಧ ಕೆಲಸಗಾರರಿಗೂ ನಮಸ್ಕರಿಸುತ್ತಾನೆ ಎಂದು ಹೇಳಿದೆ. ಜೈಮನೀಯ ಬ್ರಾಹ್ಮಣದಲ್ಲಿ ಮಾತ್ರ ನಾಯಿ ಅಶುದ್ಧ ಪ್ರಾಣಿಯೆಂದೂ ಅದು ಯಜ್ಞದಲ್ಲಿ ಬಲಿ ಕೊಡಲು

ಅಯೋಗ್ಯವಾದದ್ದೆಂದೂ ಹಾಗೂ ಯಜ್ಞ ಪ್ರದೇಶದಲ್ಲಿ ಪ್ರವೇಶಿಸಲು ಬಿಡಬಾರದೆಂದೂ ವಿವರಿಸಲಾಗಿದೆ!

Page 27

ಭರತ ಅಯೋಧ್ಯೆಗೆ ಹಿಂತಿರುಗಲು ಸಿದ್ಧವಾದಾಗ ಆತನ ಸೋದರಮಾವ ಕೊಟ್ಟ ಅನೇಕ ಉಡುಗೊರೆಗಳಲ್ಲಿ "ದೀರ್ಘ ಹಲ್ಲುಗಳುಳ್ಳ ದಪ್ಪದೇಹದ ಹುಲಿಯ ಶಕ್ತಿ ಹೊಂದಿರುವ ಅರಮನೆಯಲ್ಲೇ ಸಾಕಿದ್ದ ಎರಡೂ ನಾಯಿಗಳೂ" ಇದ್ದವೆಂದು ಅಯೋಧ್ಯಾ

ಕಾಂಡದಲ್ಲಿ ವಿವರಿಸಲಾಗಿದೆ.

ಮಹಾಭಾರತದಲ್ಲಿ ನಾಯಿಗಳ ಉಲ್ಲೇಖವಿದೆ. ಜನಮೇಜಯ ರಾಜ "ದೀರ್ಘ ಸತ್ರ" ಯಾಗ ಮಾಡುವಾಗ ಒಂದು ನಾಯಿ ಯಜ್ಞಶಾಲೆಯನ್ನು ಪ್ರವೇಶಿಸಿತು. ಅದು ಅಪವಿತ್ರವೆಂದು ಅದನ್ನು ಹೊಡೆದು ಅಟ್ಟಿದರು. ಅದು ಕೂಗುತ್ತಾ ತನ್ನ ತಾಯಿ ಸರಮ ಬಳಿ ಬಂದಿತು. ಸರಮ ಯಾಗಶಾಲೆಗೆ ಬಂದು ಅಲ್ಲಿ ವಿಚಾರಿಸಿ ವಿನಾಕಾರಣ ತನ್ನ ಮಗುವನ್ನು ಹೊಡೆದಿದ್ದಕ್ಕಾಗಿ ಜನಮೇಜಯನನ್ನು ಶಪಿಸಿತು.

ತ್ರೇತಾ ಮತ್ತು ದ್ವಾಪರ ಯುಗಗಳ ಸಂಧಿಕಾಲದಲ್ಲಿ ಭೀಕರ ಕ್ಷಾಮವೇರ್ಪಟ್ಟಿತು. ಆಗ ಹಸಿವನ್ನು ತಾಳಲಾರದೆ ವಿಶ್ವಾಮಿತ್ರ ತನ್ನ ಉದರ ಭರಣಕ್ಕಾಗಿ ಒಬ್ಬ ಚಂಡಾಲನ ಮನೆಯನ್ನು ರಾತ್ರಿ ಸಮಯ ಪ್ರವೇಶಿಸಿ ಆತ ತಿನ್ನಲು ಇಟ್ಟಿದ್ದ ನಾಯಿ ತೊಡೆ ಮಾಂಸವನ್ನು ಕದಿಯಲು ಹವಣಿಸಿ ಚಂಡಾಲ ಎಷ್ಟೇ ಬುದ್ಧಿವಾದ ಹೇಳಿದರೂ ಕೇಳದೆ ಕದ್ದು ಕೊಂಡೊಯ್ದು ತನ್ನ ಸಂಸಾರದವರಿಗೂ ಹಂಚಿ ತಿಂದನಂತೆ.

ಪಂಚ ಪಾಂಡವರ ಸ್ವರ್ಗಾರೋಹಣ ಸಮಯದಲ್ಲಿ ಅವರೊಡನೆ ಒಂದು ನಾಯಿಯೂ ಜೊತೆಯಾಗಿತ್ತು. ಹೆಂಡತಿ, ತಮ್ಮಂದಿರೆಲ್ಲರೂ ಸತ್ತು ಕೊನೆಗೆ ನಾಯಿ ಮಾತ್ರ ಯುದಿಷ್ಠಿರನೊಡನೆ ಉಳಿದಿತ್ತು. ಯುದಿಷ್ಠಿರನನ್ನು ಸ್ವರ್ಗಕ್ಕೆ ಕರೆದೊಯ್ಯಲು ಬಂದ ಇಂದ್ರ ನಾಯಿಯನ್ನು ಕರೆದೊಯ್ಯಲು ನಿರಾಕರಿಸಿದರೂ ಯುದಿಷ್ಠಿರ ಅದನ್ನು ಬಿಟ್ಟು ಸ್ವರ್ಗಕ್ಕೆ ಬರಲು ಸಿದ್ಧನಾಗಲಿಲ್ಲ. ಕೊನೆಗೆ ನಾಯಿರೂಪದಲ್ಲಿದ್ದ ಯಮ ಪ್ರತ್ಯಕ್ಷನಾಗಿ ಯುದಿಷ್ಠಿರನ ಸ್ನೇಹಪರತೆಯನ್ನು ಕೊಂಡಾಡಿದ.
ಶ್ರೀ ಕೃಷ್ಣ ಭಗವದ್ಗೀತೆಯ ೫ ನೇ ಅಧ್ಯಾಯದಲ್ಲಿ ಕರ್ಮ ಸನ್ಯಾಸಯೋಗವನ್ನು ವಿವರಿಸುವಾಗ ಯೋಗಿಗಳು, "ಮನುಷ್ಯರು, ದನಗಳು, ಆನೆಗಳು, ನಾಯಿಗಳು ಅಥವಾ ಚಂಡಾಲರು - ಎಲ್ಲಾ ಒಂದೇ ರೀತಿಯವೆಂದು ಭಾವಿಸುತ್ತಾರೆ" ಎಂದಿದ್ದಾನೆ.
ಸಂಸ್ಕೃತದಲ್ಲಿ ನಾಯಿ ಅಥವಾ ಅದರ ಗುಣಗಳನ್ನು ವಿವರಿಸುವ ಅನೇಕ ಪದಗಳಿವೆ. "ಸರಮೇಯ" (ಸರಮೆಯ ವಂಶಸ್ಥ); ಕಾಲೇಯಕ (ಉತ್ತಮ ಮನೆತನದ್ದು); ಕುಕುರ (ನಾಯಿ ಕೆಮ್ಮಲು); ಮೃಗದ್ವಂಶಕ (ಕಾಡು ಪ್ರಾಣಿಗಳನ್ನು ಬೇಟೆಯಾಡುವವು); ಬಾಷಕ (ಬೊಗಳುವುದು); ಶ್ವಾ ಅಥವಾ ಶ್ವಾನ (ನಾಯಿ) ಎಂಬುದು
ಸಾಮಾನ್ಯ ಪದಗಳು.
ಶ್ವಾ ಶಬ್ದದಿಂದ ಉತ್ಪನ್ನವಾದ ನಾಯಿ ಸಂಬಂಧ ಅಥವಾ ಅದರ ವೃತ್ತಿ ಸಂಬಂಧ ಶಬ್ದಗಳಿಗೂ ಅನೇಕವಿವೆ. ಸ್ವಾಜೀವನ (ನಾಯಿ ಪಾಲಕ); ಸ್ವಾಕ್ರೃದಿನ (ನಾಯಿ ವೃದ್ಧಿ ಮಾಡುವವನು); ಸ್ವಾವತ (ನಾಯಿ ತರಬೇತಿ ಮಾಡುವವನು); ಸ್ವಾಪತಿ (ನಾಯಿ ಹಿಂಡು ಹೊಂದಿರುವವನು); ಸ್ವಾಗೃಹ (ನಾಯಿ ಮನೆ); ಸ್ವಾಗಣ

(ನಾಯಿ ಹಿಂಡು); ಅಖೇತ (ನಾಯಿ ಬೇಟೆ); ಸ್ವವರಾಹಿಕ (ಹಂದಿ ಬೇಟೆಯ ನಾಯಿ);
ವಿಕಾರಿ(ತೋಳ ವೈರಿ); ರಾತ್ರಿ ಜಾಗರ (ರಾತ್ರಿ ಕಾವಲುಗಾರ); ಗ್ರಾಮ ಸಿಂಹ

(ಗ್ರಾಮದ ಸಿಂಹ); ಇತ್ಯಾದಿ.

೨. ಭಾರತ ಸಂಸ್ಕೃತಿ ಮತ್ತು ಸಂಪ್ರದಾಯಗಳಲ್ಲಿ ನಾಯಿ

ನಾಯಿ ಹಲವಾರು ಕಾರ್ಯಗಳಿಗೆ ಸಮರ್ಪಕವಲ್ಲವೆಂದೂ, ಅಶುದ್ಧವೆಂದೂ ಪರಿಗಣಿಸಿದ್ದರೂ ಅದು ದತ್ತಾತ್ರೇಯನ ಅನುಯಾಯಿಗಳಾದವು. ದತ್ತಾತ್ರೇಯ ಅಗ್ನಿಯ ಅವತಾರವೆಂದೂ, ಅಗ್ನಿಗೆ ಶ್ವಾನ ವಾಹನವಾದ್ದರಿಂದ ದತ್ತಾತ್ರೇಯನೊಡನೆ ನಾಯಿಗಳಿರುವುದು ಸಹಜವೆಂದೂ ಕೆಲವರ ಅಭಿಪ್ರಾಯ. ೪ ನಾಯಿಗಳು ೪ ವೇದಗಳನ್ನು ಸೂಚಿಸುತ್ತವೆಂಬುದು ಇತರರ ಅಭಿಪ್ರಾಯ. ಹೇಗೂ ಇದು ಸರಿಯಾಗಿ ಇತ್ಯರ್ಥವಾಗಿಲ್ಲ.

ಭಾರತೀಯರ ಮೂಢನಂಬಿಕೆಗಳಲ್ಲೂ ನಾಯಿಯ ಪಾತ್ರವಿದೆ. ವರಾಹ ಮಿಹಿರನ ಬ್ರಾಹಿತ ಸಂಹಿತದಲ್ಲಿ ನಾಯಿಗಳ ವರ್ತನೆಯಿಂದ ನಿರ್ಧರಿಸಬಹುದಾದ ಒಳಿತು ಅಥವಾ ಕೆಟ್ಟದ್ದನ್ನು ವಿವರಿಸಲಾಗಿದೆ. ನಾಯಿ ಅಥವಾ ನಾಯಿಗಳು ಮನೆ ಒಳಗೆ, ಹೊಸಲಲ್ಲಿ ಅಥವಾ ಹೊರಗೆ, ಬೊಗಳುವುದು ಅಥವಾ ಊಳಿಡುವುದರಿಂದ ಮತ್ತು ದೂರ ಪ್ರಯಾಣ ಹೊರಟಾಗ ನಾಯಿ ಯಾವುದಾದರೂ ವಸ್ತುವನ್ನು ಬಾಯಲ್ಲಿ ಕಚ್ಚಿ ಹಿಡಿದು ಎದುರು ಬಂದಲ್ಲಿ ಒಳ್ಳೆಯದು ಅಥವಾ ಕೆಟ್ಟದ್ದು ಆಗುತ್ತದೆಂದು ಆತ ವಿವರಿಸಿದ್ದಾನೆ. ನಾಯಿ ಚಪ್ಪಲಿಯನ್ನು ಕಚ್ಚಿ ಹಿಡಿದಿದ್ದಲ್ಲಿ ಶುಭ; ಮಾಂಸವಾದಲ್ಲಿ ಹಣ ಸಂಪಾದನೆ; ಮೂಳೆ ಹಿಡಿದಿದ್ದಲ್ಲಿ ಯಜಮಾನನಿಗೆ ಸಾವು; ಅಥವಾ ರಾಜನಿಗೆ ಕೇಡು ಅಥವಾ ಕಳ್ಳರು, ಯುದ್ಧ ಅಥವಾ ಬೆಂಕಿಯಿಂದ ನಷ್ಟ; ಮನೆಗೋಡೆ ಕೆರೆದಲ್ಲಿ ಕಳ್ಳರ ಭಯ; ಅದು ಕೊಟ್ಟಿಗೆ ಗೋಡೆಯಾದಲ್ಲಿ ದನಗಳಿಗೆ ರೋಗ; ಒಂದು ಕಣ್ಣಿನಿಂದ ನೀರು ಸುರಿಸಿದಲ್ಲಿ ಕೇಡು ಇತ್ಯಾದಿ.

ಭಾರತದ ಒಂದು ಹಿಂದುಳಿದ ಪಂಗಡವಾದ "ಗಾರೋ" ಗಳು ಚಿತೆಗೆ ಬೆಂಕಿ ಹಚ್ಚಿದಾಗ ದಿವಂಗತರ ಆತ್ಮಶಾಂತಿಗೆಂದು ಒಂದು ನಾಯಿಯನ್ನು ಚಿತೆಗೆ ಹಾಕಿ ಸುಡುವುದು ವಾಡಿಕೆಯಾಗಿದೆ. ಕಾಂದೇಶದ ಕುನ್ಬಿ ಮತ್ತು ಭ್ಹಿಲ್‌ರು ನಾಯಿಗಳಿಗೆ ಹೆಚ್ಚಿನ ಗೌರವ ಸಲ್ಲಿಸುತ್ತಾರೆ. ಮಹಾರಾಷ್ಟ್ರದವರಿಗೂ ಬೈರವನ ವಾಹನವೆಂದು

ನಾಯಿಗಳೆಂದರೆ ಹೆಚ್ಚು ಗೌರವ. ಕಾಲಬೈರವನನ್ನು ಪೂಜಿಸುವವರಿಗೆಲ್ಲಾ ನಾಯಿ ಮುಖ್ಯ ಪ್ರಾಣಿ. ಧಾರವಾಡದಲ್ಲಿನ ಮಲ್‌ಹರಿ ದೇವಸ್ಥಾನದ ಭಕ್ತರಾದ ವಾಗ್ಗಯ್ಯಗಳು ನೀಲಿ ಅಂಗಿ, ಚರ್ಮದ ಸೊಂಟ ಮತ್ತು ಮಣಿಕಟ್ಟು ಪಟ್ಟಿ ಧರಿಸಿ ನಾಯಿಗಳು ಬೊಗಳುವಂತೆ ಶಬ್ದಮಾಡುತ್ತಾರೆ. ಅವರ ಕೈಯಲ್ಲಿನ ಬಟ್ಟಲಿಗೆ ಯಾತ್ರಾರ್ಥಿಗಳು ತಿನಿಸುಗಳನ್ನು ಹಾಕಿದರೆ, ಬಟ್ಟಲನ್ನು ನೆಲದ ಮೇಲಿಟ್ಟು ನಾಯಿಗಳಂತೆ ಬೊಗಳುತ್ತಾ ಒಬ್ಬರೊಡನೊಬ್ಬರು ಕಚ್ಚಾಡುವಂತೆ ನಟಿಸಿ, ನೆಲದ ಮೇಲೆ ಮಲಗಿ ಬಟ್ಟಲಿನಿಂದ



ತಿನಿಸನ್ನು ನಾಯಿಗಳು ತಿನ್ನುವಂತೆ ನೇರವಾಗಿ ನಾಲಿಗೆಯಿಂದ ನೆಕ್ಕಿ ತೆಗೆದು #ತಿನ್ನುತ್ತಾರೆ!

ಇದು ದೇವರ ಸೇವೆಯ ಒಂದು ಪದ್ಧತಿಯೆಂದು ಅವರು ಭಾವಿಸಿದ್ದಾರೆ.

ಇದಕ್ಕೆ ವ್ಯತಿರಿಕ್ತವಾಗಿ ಅಸ್ಸಾಂನ "ಸಂಸೀಯಾ" ಮುಂತಾದ ಅಲೆಮಾರಿ ಪಂಗಡದವರು ನಾಯಿ ಮಾಂಸವನ್ನು ತಿನ್ನುತ್ತಾರೆ. ಅರಕಾನ್ ಬಳಿಯಿರುವ ಕೂಮಿ ಪಂಗಡದವರಿಗೆ ನಾಯಿ ಮಾಂಸದ ಅನ್ನ ಬಹು ಇಷ್ಟ!

ಇ. ಭಾರತದಲ್ಲಿ ನಾಯಿಗಳ ಸಂತಾನ ವೃದ್ಧಿ

ಕ್ರಿಸ್ತಪೂರ್ವದಲ್ಲೇ ಭಾರತದಲ್ಲಿ ಅತಿ ದಪ್ಪ ಗಾತ್ರದ ನಾಯಿಗಳಿದ್ದವೆಂಬುದು ತಿಳಿದು ಬಂದಿದೆ. ಅವು ದಪ್ಪಗಾತ್ರ ಮತ್ತು ಉಗ್ರ ಸ್ವಭಾವದವುಗಳಾಗಿದ್ದು ಅನೇಕರು ಅದನ್ನು ಹುಲಿ-ನಾಯಿಗಳ ಸಂಭೋಗದಿಂದ ಉತ್ಪನ್ನವಾದುವೆಂದು ಭಾವಿಸಿದ್ದರು!

ಪ್ಲೈನಿ ಭಾರತೀಯರು ಹೆಣ್ಣು ನಾಯಿಯನ್ನು ಬೆದೆ ಸಮಯದಲ್ಲಿ ಹುಲಿಗಳಿರುವ ಕಾಡಿನಲ್ಲಿ ಕಟ್ಟಿಹಾಕಿ, ಹುಲಿಯೊಡನೆ ಸಂಭೋಗ ಪಡೆದ ನಂತರ ತಂದು ಮರಿ ವೃದ್ಧಿಗೊಳಿಸುತ್ತಾರೆಂದು ವಿವರಿಸಿದ್ದಾನೆ. ಅಯಿಲ್ ಟೋನೋಸ್ ಹುಲಿ ಸಂಪರ್ಕದಿಂದ ಪಡೆದ ನಾಯಿಗಳು ಸಿಂಹ ಮುಂತಾದವುಗಳೊಡನೆ ಹೋರಾಡುತ್ತವೆಯೇ ಹೊರತು ಜಿಂಕೆ ಹಂದಿಗಳನ್ನು ಅಟ್ಟಲು ತಿರಸ್ಕರಿಸುತ್ತವೆ ಎಂದು ವಿವರಿಸಿ ಉದಾಹರಣೆಯಾಗಿ ಒಂದು ವಿವರಣೆಯಿತ್ತಿದ್ದಾನೆ. ಅಲೆಕ್ಸಾಂಡರ್ ಭಾರತಕ್ಕೆ

ದಂಡೆತ್ತಿ ಬಂದಾಗ ಅವನಿಗೆ ನಾಯಿಗಳ ಈ ಶಕ್ತಿಯಲ್ಲಿ ನಂಬಿಕೆಯಿರಲಿಲ್ಲ. ಅದನ್ನು ತೋರಿಸಲು ಒಂದು ಕ್ರೂರವಾದ ನಾಯಿಯನ್ನು ಒಂದು ಸಿಂಹದೊಡನೆ ಕಾದಾಡಲು ಬಿಟ್ಟು ನಾಯಿ ಹಾರಿ ಸಿಂಹದ ಹೆಗಲನ್ನು ಕಚ್ಚಿ ಹಿಡಿದಿದ್ದೇ ಅದರ ಬಾಲವನ್ನು #ಕತ್ತರಿಸಿದರಂತೆ. ಆ ನೋವನ್ನೂ ಲೆಕ್ಕಿಸದೆ ನಾಯಿ ತಾನು ಹಿಡಿದ ಪಟ್ಟನ್ನು ಬಿಡಲಿಲ್ಲ.
ಆಗ
ಒಂದೊಂದಾಗಿ ಅದರ ಕಾಲುಗಳನ್ನು ಕತ್ತರಿಸುತ್ತಾ ಹೋದರೂ ಅಷ್ಟು ನೋವನ್ನೂ ತಡೆದುಕೊಂಡು ಸಿಂಹದೊಡನೆ ಕಾದಾಡುತ್ತಲೇ ಇತ್ತಂತೆ! ಕೊನೆಗೆ ಕತ್ತನ್ನು ಕತ್ತರಿಸಿದರೂ ಜೋತಾಡುತ್ತಿದ್ದ ತಲೆ ಮಾತ್ರ ಕೆಳಗೆ ಬೀಳಲೇ ಇಲ್ಲವಂತೆ! ಅಷ್ಟು ಗಟ್ಟಿಯಾಗಿ ಅದು ಸಿಂಹವನ್ನು ಕಚ್ಚಿ ಹಿಡಿದಿತ್ತು! ಈ ದೃಶ್ಯವನ್ನು ಕಂಡು ಆಶ್ಚರ್ಯಗೊಂಡರೂ ದುಃಖಿಯಾದ ಅಲೆಕ್ಸಾಂಡರನಿಗೆ ೪ ನಾಯಿಗಳನ್ನು
ಉಡುಗೊರೆಯಾಗಿ
ಕೊಟ್ಟರಂತೆ!
ಅರಿಸ್ಟಾಟಲ್, ಸೆನೋಫಾನ್ ಮುಂತಾದ ಖ್ಯಾತ ಚರಿತ್ರೆಕಾರರೂ ಇದನ್ನು ನಂಬಿದ್ದರು. ಹಾಗೂ ವಿವರಿಸಿದ್ದರು. ಹುಲಿ-ನಾಯಿಗಳ ಮಧ್ಯೆ ಸಂಭೋಗ ಸಾಧ್ಯವೇ ಇಲ್ಲವೆಂಬುದು ಅವರಿಗೆ ತಿಳಿದಿರಲಿಲ್ಲ. ಭಾರತದ ನಾಯಿಗಳು ಅಷ್ಟು ಕ್ರೂರವಾಗಿ, ಯಾವುದಕ್ಕೂ ಹಿಂಜರಿಯದಿದ್ದವಾದ್ದರಿಂದ ಈ ನಂಬಿಕೆಗೆ ಕಾರಣವಾಯ್ತು. ಆ ಕಾಲದಲ್ಲಿ ಕಾವಲಿಗಾಗಿ ಮತ್ತು ಯುದ್ಧದಲ್ಲಿ ಕಾದಾಡಲು ನಾಯಿಗಳು ಮುಖ್ಯವಾಗಿದ್ದು ಅವು ದಟ್ಟದೇಹದ ಕ್ರೂರ ಸ್ವಭಾವದವುಗಳಾಗಿದ್ದವು.

ಮುಂದೆ ನಾಯಿಗಳನ್ನು ಹಲವಾರು ಕಾರ್ಯಗಳಿಗೆ ಬಳಸಲಾಯ್ತು. ದನ, ಕುರಿ, ಸಾಕುವಲ್ಲಿ ಮತ್ತು ಮನೆಗಳಲ್ಲಿ ಕಾವಲುಗಾರರಾಗಿ ಹಾಗೂ ಬೇಟೆಯಾಡುವಲ್ಲಿ ಅವು ಬಹು ಮುಖ್ಯವಾದವು. ಇವುಗಳ ಸಂತಾನಾಭಿವೃದ್ಧಿಗೆ ಹೆಚ್ಚು ಖರ್ಚಾಗುತ್ತಿದ್ದರಿಂದ ಈ ಕಾರ್ಯವನ್ನು ಸಂಸ್ಥಾನಾಧೀಶ್ವರರು ಮತ್ತು ಪಾಳೆಯಗಾರರೇ ವಹಿಸಿಕೊಂಡಿದ್ದರು.

ಇದನ್ನು ಪಶ್ಚಿಮ ಚಾಲುಕ್ಯ ರಾಜ ಸೋಮೇಶ್ವರ ತನ್ನ "ಮನಸ್ಸೋಲ್ಲಾಸ" ಗ್ರಂಥದಲ್ಲಿನ ೨೦ ವಿನೋದಗಳಲ್ಲಿ ಒಂದಾದ "ಸರಮೇಯ ವಿನೋದ" ಅಧ್ಯಾಯದಲ್ಲಿ ವಿವರಿಸಿದ್ದಾನೆ.
ಅದರಲ್ಲಿ ಆತ ಅಧೀರ, ತ್ರೈಗಾರ್ಥ, ಕರ್ನಾಟಕ, ಆಂಧ್ರ, ವನವಾಸ, ವಿದರ್ಭ ಮುಂತಾದ ನಾಯಿ ಜಾತಿಗಳನ್ನೂ, ಅವುಗಳ ಗುಣಗಳನ್ನೂ ವಿವರಿಸಿದ್ದಾನೆ. ಬಹುಶಃ ನಾಯಿ ಜಾತಿ ವಿವರಣೆಯ ಪುಸ್ತಕ, ಭಾರತದಲ್ಲಿ ಇದೇ ಮೊದಲನೆಯದು. ೧೪ ನೇ ಶತಮಾನದ ಆದಿಯಲ್ಲಿ ವಿಜಯನಗರದ ಹರಿಸಿಂಹದೇವನ ಕಾಲದಲ್ಲಿ ಮೈಥಿಲಿ ಭಾಷೆಯಲ್ಲಿ ಬರೆದ ವರ್ಣರತ್ನಾಕರದಲ್ಲಿನ ಒಂದು ಕಲ್ಲೋಲದಲ್ಲಿ (ಅಧ್ಯಾಯ) ಬೇಟೆ ನಾಯಿಗಳ ಪೂರ್ಣ ವಿವರಣೆಯಿದೆ.
ನಾಯಿ ನೆಚ್ಚಿಕೆಯ ಪ್ರಾಣಿ ಎಂಬುದಕ್ಕೆ ಭಾರತದಲ್ಲೂ ಅನೇಕ ಉದಾಹರಣೆಗಳಿವೆ. ಛತ್ರಪತಿ ಶಿವಾಜಿ ಮಹಾರಾಜರಿಗೆ ನಾಯಿ ಅತ್ಯಂತ ಪ್ರೀತಿ ಪಾತ್ರವಾಗಿದ್ದ
ಪ್ರಾಣಿ. ಶಿವಾಜಿಯ ಸಮಾಧಿ ಬಳಿಯೇ ಅದರ ಸಮಾಧಿಯನ್ನು ರಾಜಘಡದಲ್ಲಿ ನಿರ್ಮಿಸಲಾಗಿದೆ. ಛತ್ರಪತಿ ಸಾಹು ಮಹಾರಾಜರಿಗೂ ಅವರ "ಕಂಡ್ಯಾ" ನಾಯಿ ಅತ್ಯಂತ ಪ್ರೀತಿಪಾತ್ರವಾದದ್ದು. ಬೇಟೆಯಾಡಲು ಆತ ಹೋಗಿದ್ದಾಗ ಹಠಾತ್ತಾಗಿ ಮೇಲೆರಗಲು ಬಂದ ಹುಲಿಯೊಡನೆ ತಾನೇ ಹೋರಾಡಿ ಅದನ್ನು ಕೊಂದು ರಾಜನನ್ನು ರಕ್ಷಿಸಿತ್ತು. ಕೊನೆಗೆ ನಾಯಿ ತನ್ನ ಒಡೆಯ ಸತ್ತಾಗ ಉರಿಯುವ ಆತನ ಚಿತೆಯಲ್ಲಿ ಹಾರಿ ಪ್ರಾಣಬಿಟ್ಟಿತಂತೆ! ಸಂಗಂ ಮಹೂಲಿ ಬಳಿ ಅದಕ್ಕೆ ಒಂದು ಸಮಾಧಿಯನ್ನು ರಚಿಸಲಾಗಿದೆ. ಸೌರಾಷ್ಟ್ರದಲ್ಲಿನ ಉನಾ ದುರ್ಗಕ್ಕೆ ೨-೩ ಮೈಲಿ ದೂರದಲ್ಲಿ
ಚಿತ್ರಸಾಲ್ ಸರೋವರವಿದೆ. ಅದರ ಕಥೆ ಸ್ವಾರಸ್ಯವಾದದ್ದು. ಚಿತ್ರಾ ಒಬ್ಬ ವರ್ತಕನ ನೆಚ್ಚಿಕೆಯ ನಾಯಿ. ಅವನೊಡನೆ ಯಾವಾಗಲೂ ಇರುತ್ತಿತ್ತು. ಒಂದು ಸಲ ವ್ಯಾಪಾರಕ್ಕೆ ನೆರೆ ಹಳ್ಳಿಗೆ ಹೋಗಿದ್ದಾಗ ಹಣ ಸಾಲದಾಯ್ತು. ಆತ ಸ್ನೇಹಿತನೊಬ್ಬನಿಂದ ಸಾಲ

ಪಡೆದು ಆ ನಾಯಿಯನ್ನು ಒತ್ತೆಯಾಗಿ ಅಲ್ಲಿ ಬಿಟ್ಟು, ಅದಕ್ಕೆ ತಾನು ಹಿಂತಿರುಗಿ #ಬರುವವರೆಗೂ ಅಲ್ಲಿಯೇ ಇರಬೇಕೆಂದು ಹೇಳಿ ಹೊರಟ. ಮುಂದೆ ಒಂದೆರಡು ದಿನಗಳಲ್ಲೇ

ಆ ಸ್ನೇಹಿತನ ಮನೆಯಲ್ಲಿ ಕಳ್ಳತನವಾಯ್ತು. ಚಿತ್ರಾ ಜನರನ್ನು ಕರೆದುಕೊಂಡು ಹಳ್ಳಿಯ ಹೊರಗೆ ಒಂದು ಮೆಳೆಯ ಬಳಿ ತೋಡಲು ಸೂಚಿಸಿತು. ಅಲ್ಲಿ ಕಳುವಾದ ಒಡವೆಗಳೆಲ್ಲಾ ಇದ್ದವು. ಇದಕ್ಕೆ ಮೆಚ್ಚಿದ ಆ ವರ್ತಕ ಚಿತ್ರಾಳ ಒಡೆಯನಿಂದ ಪೂರ್ಣ ಹಣ ಪಾವತಿಯಾಯಿತೆಂದು ಬರೆದು ಆ ಪತ್ರವನ್ನು ನಾಯಿಯ ಕತ್ತಿಗೆ ಕಟ್ಟಿ ಊರಿಗೆ ಕಳುಹಿಸಿದ. ಅಷ್ಟರಲ್ಲೇ ಸಾಲ ಮರುಪಾವತಿ ಮಾಡಲು ಚಿತ್ರಾಳ ಒಡೆಯ ದಾರಿಯಲ್ಲಿ

Page 31

ಬರುತ್ತಿದ್ದು, ಚಿತ್ರಾಳನ್ನು ಕಂಡದ್ದೇ, ಅದು ತನ್ನ ಮಾತನ್ನು ಉಳಿಸಲಿಲ್ಲವೆಂದು ಕುಪಿತಗೊಂಡು ಹೊಡೆಯಲು ನಾಯಿ ಸತ್ತು ಬಿದ್ದಿತು. ಆಗ ಅದರ ಕತ್ತಿಗೆ ಕಟ್ಟಿದ್ದ ಕಾಗದವನ್ನು ಆತ ಓದಿ ಪಶ್ಚಾತ್ತಾಪ ಪಟ್ಟು, ಆ ಒಣ ಪ್ರದೇಶದಲ್ಲಿ ಸರ್ವರಿಗೂ ಅನುಕೂಲವಾಗುವಂತೆ ಆ ಸರೋವರವನ್ನು ಕಟ್ಟಿಸಿ ಅದಕ್ಕೆ "ಚಿತ್ರಸಾಲ್" ಎಂಬ ಹೆಸರಿಟ್ಟ. ಹಾಗೂ ಅದರ ಮೂರ್ತಿಯಿರುವ ಒಂದು ಗುಡಿಯನ್ನು ಕಟ್ಟಿಸಿದ. ಇವು ಈಗಲೂ ಉಳಿದಿವೆ.

Page 32

ಅಧ್ಯಾಯ ೩

ನಾಯಿ ನೆಂಟರು

ಕುಟುಂಬ: ಕ್ಯಾನಿಡೇ

ಮಾಂಸಾಹಾರಿಗಳಲ್ಲಿ ಕ್ಯಾನಿಡೇ ಪಂಗಡವೇ ಅತಿ ದೂರ ಓಡಬಲ್ಲ ಪ್ರಾಣಿಗಳು. ಇವುಗಳಲ್ಲಿ ತೋಳ ಅತಿ ದಪ್ಪ ಗಾತ್ರದವು. ಫೆನ್ನೆಕ್ ಅತಿ ಸಣ್ಣದು. ದೇಹ ತೆಳು ಆದರೆ ಬಲಿಷ್ಠ. ಸಣ್ಣ ಪಾದಗಳುಳ್ಳ ಕಾಲುಗಳು ಸಾಮಾನ್ಯ ನೀಳ ಮತ್ತು ದೃಢ. ಮುಂಗಾಲುಗಳಲ್ಲಿ (ಆಫ್ರಿಕಾ ಕಾಡುನಾಯಿಯನ್ನು ಉಳಿದು) ೫ ಬೆರಳುಗಳೂ

ಹಿಂಗಾಲುಗಳಲ್ಲಿ

೪ ಬೆರಳುಗಳೂ ಇವೆ. ತ್ರಿಕೋಣಾಕಾರದ ಕಿವಿಗಳು ಕೆಲವು ಪ್ರಬೇಧಗಳಲ್ಲಿ ತಲೆಗಾತ್ರಕ್ಕೆ ಅತ್ಯಂತ ದಪ್ಪವಾಗಿರುತ್ತವೆ. ಬಾಲ ಸಾಮಾನ್ಯವಾಗಿ ಪೊದರು ಕೂದಲಿರುವುದು. ಸಾಮಾನ್ಯವಾಗಿ ೪೨ ಹಲ್ಲುಗಳಿವೆ. (ಆಫ್ರಿಕಾದ ಬುಷ್ ನಾಯಿಗೆ ೩೮, ಕೆನ್ನಾಯಿಗಳಿಗೆ ೪೦ ಮತ್ತು ಬಾವುಲಿ ಕಿವಿಯ ನರಿಗೆ ೪೮ ಇರುವುದು ಇದಕ್ಕೆ ವ್ಯತಿರಿಕ್ತವಾದದ್ದು). ಹೆಣ್ಣಿಗೆ ೩ ರಿಂದ ೭ ಜೊತೆ ಮೊಲೆಗಳಿವೆ. ಗಂಡಿಗೆ ಲಿಂಗದಲ್ಲಿ ಲಿಂಗ ಮೂಳೆಯಿದೆ. ಸ್ವಾಭಾವಿಕವಾಗಿ ಅವು ಆಸ್ಟ್ರೇಲಿಯಾ, ನ್ಯೂಜಿಲೇಂಡ್, ಮಡಗಾಸ್ಕರ್ ಮತ್ತು ಓಷಿಯಾನಿಯಾಗಳಲ್ಲಿ ಮಾತ್ರವಿರುವುದಿಲ್ಲ. ಕೆಲವನ್ನು ಇತ್ತೀಚೆಗೆ ಅಲ್ಲಿಗೆ ತಂದು ಬಿಡಲಾಗಿದೆ. ಸಾಮಾನ್ಯವಾಗಿ ಹಗಲಿರುಳೂ ಎಚ್ಚರಿಕೆಯಿಂದ ಮತ್ತು ಚಟುವಟಿಕೆಯಿಂದಿರುವ ಪ್ರಾಣಿಗಳು. ಉಷ್ಣವಲಯದವು ರಾತ್ರಿ ಸುತ್ತುತ್ತವೆ. ರಕೂನ್ ನಾಯಿ

ಮಾತ್ರ ಶಿಶಿರ ನಿದ್ರೆ ಮಾಡುವ ಕುತೂಹಲಕಾರಿ ಜಾತಿ. ಇವೆಲ್ಲವೂ ತಮ್ಮ ಕಾಲು ಬೆರಳುಗಳ ಮೇಲೆ ನಡೆಯುವವು. ಕೆಲವು ಘಂಟೆಗೆ ೬೦-೬೫ ಕಿ.ಮೀ. ವೇಗದಲ್ಲಿ ಓಡುತ್ತವೆ. ನಿಶಾಚರ ಮತ್ತು ಮುಸ್ಸಂಜೆ ಅಡ್ಡಾಡುವವು ಬಿಲತೋಡಿ ಅಥವಾ ಪೊಟರೆ, ಕಲ್ಲುಸಂಧಿ, ಇತರ ಪ್ರಾಣಿಗಳ ಬಿಲಗಳಲ್ಲಿ ಅಡಗಿರುತ್ತವೆ. ಎಲ್ಲವೂ ಈಜಬಲ್ಲವು. ಅದರಲ್ಲಿ ಬುಷ್‌ನಾಯಿ ಉತ್ತಮ ಈಜುಗಾರ. ಕೆಲವು ಮಾತ್ರ ಮರ ಹತ್ತಬಲ್ಲವು. ಪರಿಸರಕ್ಕೆ ಹೊಂದಿಕೊಳ್ಳುವ ಅತ್ಯುತ್ತಮ ಗುಣಗಳುಳ್ಳ ಪಂಗಡವಿದು. ದಪ್ಪಗಾತ್ರದವು ಯಾವಾಗಲೂ ಅಧಿಕ ಸಂಖ್ಯೆಯ ಗುಂಪುಗಳಾಗಿರುತ್ತವೆ. ಸಣ್ಣ ಗಾತ್ರದವು ಒಂಟಿ ಅಥವಾ ಕೆಲವೇ ಸೇರಿ ಸಣ್ಣ ಪ್ರಾಣಿ, ಕೀಟ, ಪಕ್ಷಿಗಳನ್ನು ಬೇಟೆಮಾಡಿ ತಿನ್ನುತ್ತವೆ. ಕೊಳೆತ ಮಾಂಸವನ್ನೂ ತಿನ್ನಬಲ್ಲವು. ಆಫ್ರಿಕಾ ಕಾಡುನಾಯಿ ಮತ್ತು ಕೆನ್ನಾಯಿಗಳು ಮಾತ್ರ ಪೂರ್ಣ ಮಾಂಸಾಹಾರಿಗಳು. ಇತರವು ಸಸ್ಯಾಹಾರವನ್ನು ತಿನ್ನುತ್ತವೆ. ಅವುಗಳ ಘ್ರಾಣ ಶಕ್ತಿಯೇ ಮುಖ್ಯ. ಆದರೆ ಕಿವಿಯೂ ಚುರುಕು. ಗಂಡುಗಳು ತಮ್ಮ ಗಡಿಯನ್ನು ಮೂತ್ರಿಸಿ ಗುರುತಿಸುತ್ತವೆ. ಒಂದೇ ಸ್ಥಳದಲ್ಲಿ

ಮೇಲಿಂದ ಮೇಲೆ ಮೂತ್ರಿಸುತ್ತಿರುವುದರಿಂದ ಇದು ಮಾಸದೆ ಸ್ಥಿರವಾಗಿ ಉಳಿಯುತ್ತದೆ. ಗುಂಪುಗಳಲ್ಲಿ ಹೆಣ್ಣು ಗುಂಪಿನ ಮುಖ್ಯಸ್ಥ! ಅವೇ ಗುಂಪನ್ನು ಹತೋಟಿಯಲ್ಲಿಡುವುದು.

Page 33

ಸಂತಾನಾಭಿವೃದ್ಧಿ ಸಮಯದಲ್ಲಿ ಅವುಗಳ ಪ್ರಣಯ ಆಟ ಒಂದೇ ರೀತಿಯವಾಗಿರುತ್ತವೆ. ಗಂಡು ಹಲ್ಲುಕಿರಿದು ನಗುತ್ತಾ, ಬಾಲ ಮುದುಡಿ ಎಗರಿ, ಹೆಣ್ಣನ್ನು ಗುದ್ದಿ ಹಿನ್ನೆಗೆದು ಆಟವಾಡುತ್ತದೆ. ಅವು ಬಾಲವೆತ್ತಿ ಹಿಡಿದು ಅದನ್ನು ಬಿರುಸಾಗಿ ಅಲುಗಾಡಿಸುತ್ತಾ ಹೆಣ್ಣಿನ ಮುಂದೆ ಹಿಂದೆ ಓಡಾಡಿ ಹೆಣ್ಣಿನ ಒಲವನ್ನು ಗಳಿಸಿದ್ದೇ ಸಂಭೋಗಿಸುತ್ತದೆ. ಗಂಡಿನ ಲಿಂಗ ಹೆಣ್ಣಿನ ಯೋನಿಯೊಳ ಹೊಕ್ಕಾಗ ಅಲ್ಲಿ ಅದು ಉಬ್ಬಿಕೊಳ್ಳುತ್ತದೆ. ಕೂಡಲೇ ಅದನ್ನು ಹೊರತೆಗೆದುಕೊಳ್ಳಲಾಗುವುದಿಲ್ಲ. ಇವು ಸುಮಾರು ೫ ನಿಮಿಷದಿಂದ ೪೫ ನಿಮಿಷಗಳವರೆಗೆ "ಕೂಡಿ"ರ ಬಹುದು. ೪೫ ರಿಂದ ೭೦ ದಿನಗಳ ಗರ್ಭಾವಧಿ, ಪೊಟರೆ, ಬಿಲ ಮುಂತಾದವುಗಳಲ್ಲಿ ಹೆಣ್ಣು, ಮರಿ ಹಡೆಯುತ್ತದೆ. ಆಫ್ರಿಕಾದ ಕಾಡುನಾಯಿಗಳಲ್ಲಿ ಹಲವಾರು ಹೆಣ್ಣು ಒಂದೇ ಬಿಲದಲ್ಲಿ ಮರಿ

ಹಡೆಯಬಹುದು. ಪ್ರತಿವರ್ಷವೂ ೨ ರಿಂದ ೧೦ ಮರಿ ಜನಿಸುತ್ತವೆ. ಹುಟ್ಟಿದಾಗ ಮರಿಗಳು ಕುರುಡಾಗಿ ಅಸಹಾಯಕವಾಗಿರುತ್ತವೆ. ಆದರೆ ಮೈ ಮೇಲೆ ಪೂರ್ಣ ಕೂದಲ ಹೊದಿಕೆಯಿದೆ. ೬ ರಿಂದ ೮ ವಾರಗಳ ತನಕ ಮೊಲೆಯುಣ್ಣಿಸುತ್ತವೆ. ಸಾಕುನಾಯಿ, ತೋಳ, ಆಫ್ರಿಕಾನಾಯಿ, ಮತ್ತಿತರ ಹಲವು ಜಾತಿಗಳಲ್ಲಿ ಗಂಡು ಮರಿಗಳನ್ನು ಪ್ರೀತಿಸುತ್ತವೆ. ಮರಿ ಯಾವುದೇ ಆಗಲೀ ತೊಂದರೆ ಮಾಡುವುದಿಲ್ಲ. ಮರಿಗಳು ಬೆಳೆಯುತ್ತಾ ಇದ್ದಂತೆ ದೊಡ್ಡವಕ್ಕೆ ಹೆಚ್ಚಿನ ಗೌರವ ಸೂಚಿಸುತ್ತವೆ.

ಈ ಪಂಗಡ ಅತಿ ಪುರಾತನದ್ದಲ್ಲವೆಂದೂ ವಿಕಸನ ಚರಿತ್ರೆಯಲ್ಲಿ ಇತ್ತೀಚೆಗೆ ಉತ್ಪನ್ನವಾದವುಗಳೆಂದೂ ಈಗ ಅಭಿಪ್ರಾಯ ಪಡಲಾಗಿದೆ. ಅವು ಕರಡಿ, ರೆಕೂನ್ ಮೊದಲಾದವುಗಳ ಸಮೀಪ ಬಂಧುವಲ್ಲವೆಂದು ಖಚಿತಪಟ್ಟಿದೆ.

ಇವು ಉತ್ತರ ಅಮೆರಿಕಾದಲ್ಲಿ ಉತ್ಪನ್ನವಾದವು. ಅಲ್ಲಿಂದ ಅವು ಪಶ್ಚಿಮ ವಲಯ ಮತ್ತು ದಕ್ಷಿಣ ಅಮೆರಿಕಾಗಳಿಗೂ ಹರಡಿದವು. ಈಗ ೧೫ ಮುಖ್ಯ ಜಾತಿಗಳೂ ಅನೇಕ ಪ್ರಭೇದ ಮತ್ತು ಉಪಪ್ರಭೇದಗಳೂ ಇವೆ. ಅವುಗಳ ಉತ್ತಮ ಚರ್ಮಕ್ಕಾಗಿ ಅಥವಾ ಅವು ಕೋಳಿ, ಕುರಿ, ಆಡು, ದನಗಳನ್ನು ಕೊಲ್ಲುವ ಉಪದ್ರವಕಾರಿಗಳೆಂದು #ಅವುಗಳನ್ನು ಎಲ್ಲೆಲ್ಲೂ ಬೇಟೆಯಾಡಿ ಕೊಲ್ಲಲಾಗುತ್ತಿದೆ. ನರಿ, ಗುಳ್ಳೇ ನರಿಗಳು

ರಾಬೀಸ್

ಸೋಂಕು ವಾಹಕಗಳೆಂದು ಅವುಗಳನ್ನು ಕೊಲ್ಲುವುದುಂಟು. ಆದರೆ ಅವು ಉಪಯುಕ್ತ ಪ್ರಾಣಿಗಳೂ ಹೌದು. ಕೊಳೆತ ಮಾಂಸ, ಇಲಿ-ಹೆಗ್ಗಣ ಮತ್ತಿತರ ಉಪದ್ರವಕಾರಿ ಪೀಡಕಗಳನ್ನು ತಿಂದು ಅನುಕೂಲ ಮಾಡುತ್ತವೆ.

ಹಿಂದೆ ಕತ್ತೇಕಿರುಬಗಳೂ ಈ ಕುಟುಂಬದವೆಂದು ಪರಿಗಣಿಸಲಾಗಿತ್ತು. ಆದರೆ ಈಗ ಪ್ರತ್ಯೇಕ ಕುಟುಂಬ ಹಯನಿಡೀ ಎಂದು ವಿವರಿಸಲಾಗಿದೆ.

ಕಯೋಟಿ

ಇದು ಉತ್ತರ ಅಮೆರಿಕಾದ ಒಂದು ನಾಯಿಜಾತಿ. ಕ್ಯಾನಿಸ್ ಲಾಟ್ರಾನ್ಸ್ ಎಂಬ ಶಾಸ್ತ್ರೀಯ ನಾಮ ಪಡೆದಿದೆ. ಇದನ್ನು ಹುಲ್ಲುಗಾವಲಿನ



ತೋಳವೆಂದೂ ಕರೆಯುತ್ತಾರೆ. ಇದು ಸಾಮಾನ್ಯ ಗಾತ್ರದ ತೋಳ, ದಪ್ಪ ನಿಮಿರಿ ನಿಂತಿರುವ ಕಿವಿ ಮತ್ತು ಪೊದರು ಬಾಲವಿದೆ. ಅಲಾಸ್ಕಾದಿಂದ ಸಾಮಾನ್ಯವಾಗಿ ಸಂಯುಕ್ತ ಸಂಸ್ಥಾನದಲ್ಲೆಲ್ಲಾ ಹರಡಿದೆ. ಸಾಮಾನ್ಯವಾಗಿ ಕೆಂಪು ಕಂದು ವರ್ಣದ ಮೈ. ಕತ್ತು ಮತ್ತು ಕಾಲುಗಳ ಒಳಭಾಗ ಬಿಳುಪು. ಅವು ಮಾಂಸಾಹಾರಿಗಳಾದರೂ ಸರ್ವಭಕ್ಷಕರು. ಸಮಯೋಚಿತವಾಗಿ ದೊರೆತ ಆಹಾರ ಸೇವಿಸಲು ಸಿದ್ಧ.

ಕುರಿಮರಿಗಳಿಂದ ಕೋಳಿ, ಮೊಲ, ಇಲಿಗಳನ್ನೂ ಅನೇಕ ಹಣ್ಣು ಕಾಯಿ, ಹುಲ್ಲುಗಳನ್ನು (ಅದರಲ್ಲೂ ಕಲ್ಲಂಗಡಿ, ಪಾಪಾಸಕಳ್ಳಿಯ ಹಣ್ಣು), ಕೆಲವು ಸಮಯ

ಕೀಟಗಳು,

ಕಾಗದ, ಚರ್ಮ ಮುಂತಾದವುಗಳನ್ನು ತಿನ್ನಬಲ್ಲವು! ಸತ್ತು ಕೊಳೆತ ಪ್ರಾಣಿಗಳನ್ನೂ ಚೆನ್ನಾಗಿ ತಿನ್ನುತ್ತವೆ. ಬಹುಶಃ ಇದರಿಂದಲೇ ಅದು ರೈತರ ಶತ್ರುವೆಂಬ ಭಾವನೆ ಬಂದಿರುವುದು. ಕರು ಅಥವಾ ದನಗಳು ಸತ್ತಿದ್ದಲ್ಲಿ ವಾಸನೆ ಹಿಡಿದು ಇವು ಅಲ್ಲಿಗೆ ಬರುವುದು ಕಂಡಿತು. ರೈತನ ಕಣ್ಣಿಗೆ ಈ ದೃಶ್ಯ ಕಂಡಾಗ ಇವೇ ತನ್ನ ರಾಸುಗಳನ್ನು ಕೊಂದವು ಎಂದು ಆತ ಊಹಿಸುವುದು ತಪ್ಪೇನಲ್ಲ. ಅವು ಗುಂಪುಕೂಡಿ ದೊಡ್ಡ ಜಿಂಕೆಗಳನ್ನು ಬೇಟೆಯಾಡಿ ಕೊಲ್ಲುತ್ತವೆಂದು ವರದಿಯಿದೆ. ಆಗ ಗಂಟೆಗೆ ೪೦ ಮೈಲಿ ವೇಗದಲ್ಲಿ ಓಡುತ್ತವೆ.

ಇದರಿಂದ ಅದನ್ನು ಬೇಟೆಯಾಡಿ ಅಥವಾ ವಿಷವಿಕ್ಕಿ ಕೊಲ್ಲುವುದು ಸಾಮಾನ್ಯ. ಇವು ರೈತನ ಪರಮಶತ್ರುವೆಂದು ಅಲ್ಲಿ ಭಾವಿಸಲಾಗಿದೆ. ಆದರೆ ಅದು ತಪ್ಪು. ಇಲಿ ಮುಂತಾದವುಗಳನ್ನು ತಿಂದು ನಿಯಂತ್ರಿಸಿ ರೈತನಿಗೆ ಸಹಾಯಮಾಡುವ ಪ್ರಾಣಿಗಳಿವು. ಅಮೆರಿಕಾದಲ್ಲಿ ಜನರು ಎಷ್ಟೇ ಕೊಂದರೂ ಅವುಗಳ ಸಂಖ್ಯೆ ಹೆಚ್ಚುತ್ತಲೇ ಇವೆ. ಅವು ಜೊತೆಗೂಡಿದ್ದಲ್ಲಿ ಜೀವಾವಧಿ ಒಟ್ಟಿಗಿರುತ್ತವೆ. ಬ್ಯಾಡ್ಜರ್ ಅಥವಾ ಇತರ ಪ್ರಾಣಿಗಳ ಬಿಲದಲ್ಲಿ ಅಥವಾ ತಾವೇ ಬಗೆದು ರಚಿಸುವ ಬಿಲಗಳಲ್ಲಿ ವಾಸಿಸುತ್ತವೆ. ಸಂಭೋಗಾ ನಂತರ ೨ ತಿಂಗಳಲ್ಲಿ ೫ ರಿಂದ ೧೦ ಮರಿಗಳು ಹುಟ್ಟುತ್ತವೆ. ಮರಿ ಹುಟ್ಟಿದ ನಂತರ ೬ ವಾರಗಳವರೆಗೆ ಹೆಣ್ಣು ಅಲ್ಲೇ ಇದ್ದು ಮರಿಗಳನ್ನು ರಕ್ಷಿಸುತ್ತದೆ. ಗಂಡು ಆಗ

#ಹೆಣ್ಣಿಗೆ

ಆಹಾರ ಒದಗಿಸುತ್ತದೆ. ಮರಿಗಳು ದೊಡ್ಡವಾದಂತೆಲ್ಲಾ ಗಂಡು ಒದಗಿಸಿದ ಆಹಾರದಲ್ಲಿ ಸ್ವಲ್ಪ ಅಂಶವನ್ನು ಹೆಣ್ಣು ವಾಂತಿಮಾಡಿ ಮರಿಗಳಿಗೆ ಉಣಿಸುತ್ತದೆ. ಬಹುಶಃ ಹಸಿ ಮಾಂಸಕ್ಕಿಂತ ಹೀಗೆ ಅರ್ಧ ಜೀರ್ಣವಾದ ಮಾಂಸ ಮರಿಗಳಿಗೆ ಸೂಕ್ತವಾದದ್ದೇನೋ. ಅಲ್ಲಿಂದ ತಂದೆತಾಯಿಗಳೆರಡೂ ಮರಿಗಳೊಡನೆ ಆಡುತ್ತಾ ಅವುಗಳಿಗೆ ಬೇಟೆ ಮುಂತಾದವನ್ನು ಕಲಿಸುತ್ತವೆ. ೬-೮ ತಿಂಗಳಲ್ಲೇ ಮರಿಗಳು ಸ್ವತಂತ್ರವಾಗುತ್ತವೆ.

ಈ ಕುಟುಂಬದಲ್ಲಿ ಕಯೋಟಿಗಳು ಅತಿ ಬುದ್ಧಿವಂತಿಕೆಯ ಪ್ರಾಣಿ. ಎಲ್ಲಾ

ಪರಿಸ್ಥಿತಿಗಳಿಗೂ ಹೊಂದಿಕೊಳ್ಳುತ್ತವೆ. ಆದ್ದರಿಂದಲೇ ಪರಿಹಾರವಿಲ್ಲದ ವಿಷ ೧೦೮೦ ನ್ನು ಹೆಚ್ಚಾಗಿ ಬಳಸಿ ನೂರಾರು ಕೊಲ್ಲಲ್ಪಡುತ್ತಿದ್ದರೂ ಜಾತಿ ನಶಿಸಿಲ್ಲ,
#ವೃದ್ಧಿಗೊಳ್ಳುತ್ತಿವೆ.
ಪಟ್ಟಣಗಳ ನಡುವೆಯೂ ಜೀವಿಸಬಲ್ಲವು. ಬಚ್ಚಿಟ್ಟುಕೊಳ್ಳಲು ನುರಿತವುಗಳು ಹಗಲೆಲ್ಲಾ ಅಡಗಿದ್ದು ರಾತ್ರೆ ಸುತ್ತಿಬರುತ್ತವೆ. ಪ್ರಾಣಾಪಾಯವಿದ್ದಾಗ ನೀರಿನಲ್ಲಿ



ಮುಳುಗಿ ಮರದ ದಿಮ್ಮಿಯಂತೆ ಅಲುಗಾಡದೆ ತೇಲುವುದೂ, ಹುಲ್ಲು ಮೆದೆಯಲ್ಲಿ ಹುದುಗಿ ಅವಿತುಕೊಳ್ಳುವುದೂ, ತನ್ನ ಮೈ ಬಣ್ಣವನ್ನು ಬಳಸಿ ಮಣ್ಣಿಗೆ ಅಂಟಿ ಕಾಣದಂತೆ ಚಲಿಸದೆ ಬಿದ್ದುಕೊಳ್ಳುವುದೂ ಸಾಮಾನ್ಯ. ಕೋಳಿಗಳನ್ನು ಕಳೆದುಕೊಳ್ಳುತ್ತಿದ್ದ ರೈತ ರಾತ್ರಿ ಹಠಾತ್ತಾಗಿ ಎದ್ದುಬಂದಾಗ ಕೋಳಿಗೂಡಿನ ಪಕ್ಕ ಬಿದ್ದಿದ್ದ ಕಯೋಟಿ ದೇಹವನ್ನು ಕಂಡು ತಾನಿಟ್ಟಿದ್ದ ವಿಷ ತಿಂದು ಸತ್ತಿದೆಯೆಂದು ಭಾವಿಸಿ ಎಳೆದು ಹೊರ ಬಿಸುಟಾಗ ಹಠಾತ್ತನೆ ಎದ್ದು ಓಡಿಹೋಯಿತೆಂಬ ವರದಿಯಿದೆ!
ಆಟಗಾರರಿವು. ಕಡ್ಡಿಗಳನ್ನು ಹಿಡಿದು ಅವುಗಳನ್ನು ಅತ್ತಿತ್ತ ಬಿಸಾಡಿ ಅಡ್ಡಾಡುವುದೂ, ಇತರವನ್ನು ಓಡಿಸಿ ಬೆನ್ನಟ್ಟುವುದೂ ಅವುಗಳ ಆಟ. ಅಂತೂ ಅತಿ ಎಚ್ಚರಿಕೆಯ
ಬುದ್ಧಿವಂತ ತೋಳ ಜಾತಿ ಪ್ರಭೇದವಿದು.

ಡಿಂಗೋ

ಇವು ಆಸ್ಟ್ರೇಲಿಯಾದಲ್ಲಿರುವ ಕಾಡು ನಾಯಿಗಳು. "ಡಿಂಗೋ" ಎನ್ನುವುದು ಆಸ್ಟ್ರೇಲಿಯಾದಲ್ಲಿ ಒಂದು ಬಯ್ಯುವ ಪದ. ಅದು ಕಪಟ, ಠಕ್ಕು, ಮತ್ತು ಹೇಡಿತನ ಸೂಚಿಸುವ ಪದವೆಂದಾಗಿದೆ! ಆಸ್ಟ್ರೇಲಿಯಾದಲ್ಲಿರುವ ಆದಿವಾಸಿಗಳು ಮಾತ್ರ ಇವುಗಳನ್ನು ಮೆಚ್ಚುವರು. ಮರಿಗಳನ್ನು ಹಿಡಿದು ತಂದು ಎಚ್ಚರಿಕೆಯಿಂದ ಸಾಕಿ ಬೇಟೆಯಾಡಲು ತಮ್ಮ ಸಂಗಾತಿಗಳನ್ನಾಗಿ ಮಾಡಿಕೊಳ್ಳುತ್ತಾರೆ. ಮರಿ ಚಿಕ್ಕವಾಗಿದ್ದು ಹಾಲಿನ

ಅಗತ್ಯವಿದ್ದಲ್ಲಿ ಹೆಂಗಸರು ಮೊಲೆಯುಣಿಸಿ ಸಾಕುವುದೂ ಉಂಟು. ಇದರಿಂದ ಅವು ಒಲವು ಉಳ್ಳವಾಗಿ ಸ್ವಾಮಿನಿಷ್ಠೆಯಿಂದ ಕಾರ್ಯವೆಸಗುವವುಗಳಾಗುತ್ತವೆ. ಇವು ಬಹುಶಃ ಏಷ್ಯಾಖಂಡದ ತೋಳ ಅಥವಾ ನರಿಯಿಂದ ಉತ್ಪನ್ನವಾದ ಪಳಗಿದ ಸಾಕು ನಾಯಿ ಜಾತಿಯೆಂದೂ, ಅಲ್ಲಿಂದ ಆಸ್ಟ್ರೇಲಿಯಾ ಖಂಡಕ್ಕೆ ಆದಿವಾಸಿಗಳು ವಲಸೆ ಬಂದಾಗ ಅವರೊಡನೆ ಈ ನಾಯಿಯೂ ಬಂದು ಇಲ್ಲಿ ಹೆಚ್ಚಿಕೊಂಡಿತೆಂದೂ ಈಗ ನಿರ್ಧರಿಸಲಾಗಿದೆ.

ಇವು ಸಾಮಾನ್ಯವಾಗಿ ಕಾಲೀ ನಾಯಿ ಗಾತ್ರದವು. ಸುಮಾರು ೨ ೧/೨ ಅಡಿ ಎತ್ತರ ಮತ್ತು ಮುಸುಡಿನಿಂದ ಬಾಲ ತುದಿಯವರೆಗೆ ೫ ಅಡಿ ನೀಳವಿರಬಲ್ಲ ಪ್ರಾಣಿ. ತಲೆ ಅಗಲ ಮತ್ತು ಹುಬ್ಬು ಬಳಿ ನಿರ್ದಿಷ್ಟ ಉಬ್ಬು ಇದೆ. ಮುಸುಡು ಮುಂದಕ್ಕೆ ಮೊನಚಾಗಿರುವಂತೆ ಕಡಿದಾಗುತ್ತದೆ. ಕಿವಿಗಳು ಬುಡದಲ್ಲಿ ಅಗಲವಾಗಿ ನೇರವಾಗಿ ನಿಮಿರಿ ನಿಂತಿರುತ್ತವೆ. ಪೊದರು ಕೂದಲಿಂದಾವೃತ ನೀಳ ಬಾಲ. ಹಗುರ ಕೆಂಪು ಅಥವಾ ಕಂದು ಕಪ್ಪುವರ್ಣ. ಹೊಟ್ಟೆಯಡಿ ಭಾಗ, ಕತ್ತು ತಳಭಾಗ ಮತ್ತು ಬಾಲ ತುದಿ ಬಿಳುಪು. ಬೂದು ಬಣ್ಣದ ತಳ ಹೊಟ್ಟೆಯ, ಮೃದು ತುಪ್ಪುಳ ಕೂದಲವು, ಹೊರ ಆವರಣ ಗಡಸು ಗಿಡ್ಡ ಕೂದಲವು.

ಕೆಲವು ವೇಳೆ ಅಚ್ಚ ಬಿಳುಪು ವರ್ಣದವೂ ಹುಟ್ಟುತ್ತವೆ. ಆಸ್ಟ್ರೇಲಿಯಾದ ನೈರುತ್ಯ ಭಾಗದಲ್ಲಿ ಬಿಳುಪು ವರ್ಣದ ಪಂಗಡವೇ ಇದೆ. ಅವು ನಾಯಿಗಳಾದ್ದರಿಂದ ಇತರ

Page 36

ಜಾತಿಯ ನಾಯಿಗಳೊಡನೆ ಕೂಡಿ ಮರಿ ಮಾಡುತ್ತವೆ. ಅವು ಸುಂದರ ನಾಯಿಗಳು. ಅತ್ಯುತ್ತಮ ಬೇಟೆಗಾರರು. ಬೆರಳು ತುದಿಗಳ ಮೇಲೆ ನಿಶ್ಶಬ್ದವಾಗಿ ದಣಿಯದೆ ದೀರ್ಘ ಕಾಲ ಓಡಿ ಹಠಾತ್ತಾಗಿ ಕೊಲ್ಲಬಲ್ಲ ಶಕ್ತಿಯುಳ್ಳವು. ಅದರ ಬಲಿಷ್ಠ ದವಡೆಯಿಂದ ಕಚ್ಚಿದಲ್ಲಿ ಮಾಂಸ ಹಾಗೆಯೇ ಕಿತ್ತು ಬರುತ್ತದೆ. ಬೆನ್ನುಮೂಳೆಯಿರುವಲ್ಲಿ ಕಚ್ಚಿ ಕಶೇರುವನ್ನು ತುಂಡುಮಾಡಲೂ ಬಹುದು. ಸುಮಾರು ೬೦-೬೫ ಪೌಂಡು ತೂಕದವು. ಅಲ್ಲಿಗೆ ವಲಸೆ ಬಂದ ಜನರು ಹೆಚ್ಚು ಕಾಡುಗಳನ್ನು ಕಡಿದು ತೆಗೆದು ಕುರಿ ಮತ್ತು

ದನಗಳನ್ನು ಸಾಕಲುಪಕ್ರಮಿಸಿದಾಗ ಇತರ ಬೇಟೆ ಆಹಾರ ಅಭಾವವೇರ್ಪಟ್ಟು ಇವು ಕುರಿ, ಕರು ಮುಂತಾದವುಗಳಿಗೆ ಉಪದ್ರವಕಾರಿಯಾಯಿತು. ಅತ್ಯಧಿಕ ಸಂಖ್ಯೆಯಲ್ಲಿ ಹೆಚ್ಚಿ ಲಕ್ಷಾಂತರ ರೂಪಾಯಿಗಳ ನಷ್ಟವೇರ್ಪಟ್ಟಿತು. ಒಂದು ಸತ್ತ ಕುದುರೆಯನ್ನು ವಿಷಮಯವಾಗಿಸಿದಾಗ ಒಂದೇ ರಾತ್ರಿಯಲ್ಲಿ ೧೪೧ ನಾಯಿಗಳು ಸತ್ತು ಬಿದ್ದಿದ್ದವಂತೆ!
ಗಂಡು ತನ್ನದೇ ಆದ ಗಡಿಯನ್ನು ಸುತ್ತಲೂ ಮೂತ್ರಿಸಿ ಗುರುತಿಸುತ್ತದೆ.
ಅದರೊಳಗೆ ಇತರವುಗಳಿಗೆ ಪ್ರವೇಶವಿಲ್ಲ. ಗಡಿರಕ್ಷಣೆಗೆ ತೀವ್ರವಾಗಿ ಕಾದಾಡುತ್ತವೆ.
೨-೩ ವರ್ಷ ವಯಸ್ಕವಾದಾಗ ತನ್ನ ಸಂಗಾತಿಯನ್ನು ಚುನಾಯಿಸಿಕೊಳ್ಳುತ್ತದೆ.
ಗರ್ಭಾವಧಿ ೯ ವಾರಗಳು. ೫ ರಿಂದ ೮ ಮರಿಗಳು ಹುಟ್ಟುತ್ತವೆ. ಸಾಮಾನ್ಯವಾಗಿ ಸುತ್ತಲೂ
ಕಾಣುವಂತಹ ಎತ್ತರ ಪ್ರದೇಶದಲ್ಲಿನ ಗುಹೆ, ಬಿಲ, ಮರ ಪೊಟರೆ ಮುಂತಾದವುಗಳಲ್ಲೇ ಮರಿ ಪೋಷಣೆ. ಆದರೆ ಆ ಸ್ಥಳ ನೀರು ಮತ್ತು ಆಹಾರಕ್ಕೆ ಅನುಕೂಲವಾಗಿರುವಂತೆ ಎಚ್ಚರ ವಹಿಸುತ್ತವೆ. ಸಾಮಾನ್ಯವಾಗಿ ಅವು ಹಗಲು ಬೇಟೆಗಾರರು. ಜನಸಾಂದ್ರತೆ ಇರುವಲ್ಲಿ ಅವು ರಾತ್ರಿ ಹೊರಬರುತ್ತವೆ. ಮರಿಗಳು ೯ ತಿಂಗಳಿಂದ ೧ ವರ್ಷದವರೆಗೆ ಜೊತೆಯಲ್ಲಿದ್ದು ಬೇರೆಯಾಗುತ್ತವೆ.
ಅವು ಬಹುವೇಗದಿಂದ ಓಡಲಾರವು. ಗಂಟೆಗೆ ೩೦ ಮೈಲಿ ಮೇಲೆ ಅದಕ್ಕೆ ಸಾಧ್ಯವಿಲ್ಲ. ೨-೩ ಜೊತೆಗೂಡಿ ಬೇಟೆಯಾಡುವುದು ಸಾಮಾನ್ಯ. ಇದರಿಂದಲೇ ಅವು ಯಶಸ್ವಿಯಾಗುವುದು. ಪ್ರಾಣಿಗಳನ್ನು ಸುತ್ತಸುತ್ತಿಸಿ ಅಥವಾ ಓಡಿಸಿ ಅವುಗಳಲ್ಲಿ ಯಾವುದಾದರೂ ಸುಸ್ತಾಗಿ ಹಿಂದೆ ಬಿದ್ದಾಗ ಮೇಲೆರಗಿ ಕತ್ತು ಕಾಲುಗಳಲ್ಲಿನ ಮಾಂಸ ಕಿತ್ತು ಕೊಲ್ಲುತ್ತವೆ. ಕೆಲವು ವೇಳೆ ಅನಾವಶ್ಯಕವಾಗಿ ೧೫-೨೦ ಕುರಿಗಳನ್ನು ಕೊಲ್ಲುವ ವಿನಾಶಕಾರಿಗಳಿವು. ಬಹುಶಃ ಇನ್ನೂ ನುರಿತಿಲ್ಲದ ಮರಿಗಳೋ ಅಥವಾ ರಕ್ತವಾಸನೆಯಿಂದ ಮತ್ತವಾದ ಹಿರಿಯವೋ ಇದಕ್ಕೆ ಕಾರಣವಿರಬಹುದು. ಅಂತೂ ಹೆಚ್ಚು ನಷ್ಟ
ಮಾಡಬಲ್ಲವು. ಅವು ಆಹಾರ ಅರಸಿ ಋತುಮಾಸಕ್ಕೆ ತಕ್ಕಂತೆ ಒಂದು ಪ್ರದೇಶದಿಂದ

ಇನ್ನೊಂದಕ್ಕೆ ವಲಸೆ ಹೋಗುವುದೂ ಉಂಟು.

ಈಗ ಇದನ್ನು ತಡೆಯಲು ಕ್ವೀನ್‌ಲ್ಯಾಂಡ್‌ನಲ್ಲಿ ಸರ್ಕಾರ ಸುಮಾರು ೨೦-೨೫ ಕೋಟಿ ರೂಪಾಯಿಗಳ ವೆಚ್ಚದಲ್ಲಿ ೩೦೦೦ ಮೈಲಿ ನೀಳದ, ೬ ಅಡಿ ಎತ್ತರದ ಬೇಲಿ ರಚಿಸಿ ಕುರಿ, ದನ ಸಾಕುವ ಪ್ರದೇಶದೊಳಕ್ಕೆ ಇವು ಬರದಂತೆ ಮಾಡಿದ್ದಾರೆ. ಈಗಲೂ ಅಲ್ಲಿ ಈ ನಾಯಿಯನ್ನು ಕೊಂದವರಿಗೆ ಬಹುಮಾನ ಕೊಡುತ್ತಾರೆ.



ತೋಳ ಕ್ಯಾನಿಸ್ ಲೂಪಸ್

ಇವುಗಳಿಂದಲೇ ನಾಯಿಗಳು ಉತ್ಪನ್ನವಾಗಿರುವುದೆಂದು ಖಚಿತವಾಗಿದೆ.

ಗಂಡುಗಳು ಹೆಣ್ಣುಗಳಿಗಿಂತ ದಪ್ಪಗಾತ್ರ. ಯೂರೋಪಿನಲ್ಲಿ ಶೀತವಲಯದ ಮೆಡಿಟರೇನಿಯನ್‌ವರೆಗೆ, ಅರೇಬಿಯಾ, ಏಷ್ಯಾಮೈನರ್, ಪಾಕಿಸ್ಥಾನ, ಭಾರತ ಮತ್ತು ಜಪಾನ್ಗಳಲ್ಲೂ ಮತ್ತು ಅಮೆರಿಕಾದಲ್ಲಿ ಅಲಾಸ್ಕಾದಿಂದ ಮೆಕ್ಸಿಕೋದವರೆಗೂ ಹರಡಿದ್ದವು. ಈಗ ಬಹಳ ಕಡಿಮೆಯಾಗಿದೆ. ಅವು ವಾಯುಗುಣ, ಮಣ್ಣಿನ ವೈವಿಧ್ಯತೆ ಮತ್ತು ಸಸ್ಯ ವೈವಿಧ್ಯತೆಗೆ ಅನುಗುಣವಾಗಿ ಹೊಂದಿಕೊಳ್ಳಬಲ್ಲವು.

ದಪ್ಪಗಾತ್ರದವು. ಭುಜದ ಬಳಿ ಸುಮಾರು ೨ - ೨ ೧/೪ ಅಡಿ ಎತ್ತರವಿರುತ್ತದೆ. ೬೫ ರಿಂದ ೧೬೫ ಪೌಂಡು ತೂಕವಿರುತ್ತದೆ. ಇರುವ ಪ್ರದೇಶಕ್ಕೆ ಹೊಂದಿಕೊಳ್ಳುವಂತಹ ಬಣ್ಣ ವೈವಿಧ್ಯತೆ ಇದೆ. ಸಾಮಾನ್ಯವಾಗಿ ಬೆನ್ನು, ಪಕ್ಕ ಮತ್ತು ಬಾಲಗಳ ಬಳಿ

ಬೂದು ಕಪ್ಪು ವರ್ಣವಿದೆ. ಈ ವರ್ಣ ಬಿಳುಪು, ಕಪ್ಪು ಮತ್ತು ಕಂದು ವರ್ಣದ ಕೂದಲುಗಳಿಂದ ಉಂಟಾಗುತ್ತದೆ. ಹೊಟ್ಟೆ ಮತ್ತು ಕತ್ತು ಬಿಳುಪು ಅಥವಾ ಹಗುರ ವರ್ಣ. ಮುಸುಡು, ಕಿವಿ ಮತ್ತು ಕಾಲುಗಳು ಹಗುರ ಕಂದು ಅಥವಾ ಸಿನ್ನಾಮನ್ ಬಣ್ಣದವು. ಅವುಗಳಿಗೆ ದುಂಡು ಪಾಪೆಯಿದೆ. ಉತ್ತರ ಅಮೆರಿಕಾ ಕಾಡುಗಳಲ್ಲಿರುವ ಕಾಡು

ತೋಳ ಕಪ್ಪು ವರ್ಣ. ಶೀತವಲಯದಲ್ಲಿ ಬಿಳಿವರ್ಣದ ತೋಳಗಳಿರುತ್ತವೆ. ಪೂರ್ವ

ವಲಯದಲ್ಲಿ ೬ ಉಪಪ್ರಭೇದಗಳಿವೆ. ಉತ್ತರ ಅಮೆರಿಕಾದಲ್ಲಿ ಸುಮಾರು ೨೦ ಉಪ ಪ್ರಭೇದಗಳಿವೆ. ಇದರಲ್ಲಿ ಸಂಯುಕ್ತಸಂಸ್ಥಾನದ ದಕ್ಷಿಣ ಭಾಗಗಳಲ್ಲಿರುವ ಕೆಂಪು ತೋಳ ಇವುಗಳಲ್ಲೆಲ್ಲಾ ಸಣ್ಣ ಗಾತ್ರದವು. ಜಪಾನಿನಲ್ಲಿದ್ದ ಪ್ರಭೇದ ನಿರ್ನಾಮವಾಗಿದೆ. ಇಂದಿನ ನಾಯಿಗಳ ಪೂರ್ವಜರೆಂದು ಪರಿಗಣಿಸಲಾದ ಭಾರತ ತೋಳಗಳೂ ಅಲ್ಪ ಸಂಖ್ಯೆಯವುಗಳಾಗಿವೆ.

ಕಿವಿ ಅತಿ ಸೂಕ್ಷ್ಮ. ಇದೇ ಅದರ ಮುಖ್ಯ ಗುಣ. ವಾಸನೆ ಎರಡನೆಯದು, ಅವು ಊಳಿಡುತ್ತವೆ. ಇದರಿಂದಲೇ ಒಂದರೊಡನೊಂದು ಸಂಪರ್ಕ ಹೊಂದುವುದು, ಬೊಗಳುವುದು, ಗುರುಗುಟ್ಟುವುದು, ಕುಂಯ್ಞಿಗುಟ್ಟುವುದು ಮುಂತಾದ ಶಬ್ದಗಳನ್ನು ಮಾಡುತ್ತವೆ. ಕಾನ್ಹೈನ್ ಗುಂಪಿನಲ್ಲೇ ಅತ್ಯಂತ ಬಲಿಷ್ಠ ತಲೆಬುರುಡೆ, ಮತ್ತು ಹಲ್ಲುಗಳುಳ್ಳವು. ಇವು ಹೆಚ್ಚಾಗಿ ಗೊರಸಿನ ಪ್ರಾಣಿಗಳನ್ನು ತಿಂದು ಜೀವಿಸುವವು. ಆ ಆಹಾರ ದೊರಕದಿದ್ದಲ್ಲಿ ಕೊಳೆತ ಮಾಂಸ, ಸಣ್ಣ ಪ್ರಾಣಿಗಳು ಮತ್ತು ಕೆಲವು ವೇಳೆ ಸಸ್ಯಾಹಾರಗಳನ್ನೂ ತಿನ್ನುತ್ತವೆ. ಸಾಮಾನ್ಯವಾಗಿ ದಿನಕ್ಕೆ ೬-೯ ಪೌಂಡ್ ಮಾಂಸ ಬೇಕು. ಹಸಿದಿದ್ದಾಗ ದೊರಕಿದಲ್ಲಿ ೨೫ ಪೌಂಡುಗಳಷ್ಟನ್ನು ನುಂಗುತ್ತವೆ. ಹಾಗೆ ತಿಂದಾಗ ಮುಂದೆ ೩-೪ ದಿನ ತಿನ್ನದೇ ಉಪವಾಸವಿರುತ್ತವೆ.

ಇವು ಗುಂಪು ಪ್ರಕೃತಿಯವು. ೨೦ ಕ್ಕೂ ಮೇಲ್ಪಟ್ಟ ಹಿಂಡುಗಳು ಕೆಲವು ಕಡೆ ಕಂಡು ಬಂದಿವೆ. ಅನಾಯಾಸವಾಗಿ ಬಹುದೂರ ಓಡಬಲ್ಲವು. ಒಂದೇ ದಿನದಲ್ಲಿ ೪೦-
೫೦
ಮೈಲಿ ಓಡಬಹುದು. ದಪ್ಪ ಗಾತ್ರದ ಪ್ರಾಣಿಗಳನ್ನು ಬೇಟೆಯಾಡುವುದರಿಂದ ಅವು

ಗುಂಪಾಗಿ ಬೇಟೆಯಾಡುತ್ತವೆ. ಒಂದು ಪಂಗಡ ತನ್ನ ಎಲ್ಲೆಯನ್ನು ಅಲ್ಲಲ್ಲಿ ಮೂತ್ರಿಸಿ ಗುರುತಿಸಿರುತ್ತವೆ. ಇತರವು ಇದರೊಳಗೆ ಬರುವಂತಿಲ್ಲ. ಬಂದವುಗಳೊಡನೆ ಜಗಳವಾಡಿ ಕೊಲ್ಲಬಹುದು. ಇದು ಅಪರೂಪ. ಅವು ಎಲ್ಲಾ ಪ್ರಾಣಿಗಳನ್ನೂ ಬೇಟೆಯಾಡುವುದಿಲ್ಲ. ನಿಶ್ಯಕ್ತವಾದವು, ವಯಸ್ಸಾದವೂ, ಕಾಯಿಲೆಯುಳ್ಳವುಗಳನ್ನು

ಆರಿಸಿ

ಕೊಲ್ಲುತ್ತವೆ. ತಮ್ಮ ಬೇಟೆಯನ್ನು ಬಹುದೂರ ಅಟ್ಟಿ ಓಡಿಸಿದಾಗ ಚಟುವಟಿಕೆಯಿಂದಿರುವ ಗಟ್ಟಿಮುಟ್ಟಾದ ವಯಸ್ಕ ಪ್ರಾಣಿಗಳು ದಣಿಯುವುದಿಲ್ಲ. ಹಿಂದೆ ಬೀಳುವುವು ಅಶಕ್ತವಾದವುಗಳು. ಅವುಗಳನ್ನು ಬೇಟೆಯಾಡಿ ಕೊಲ್ಲುತ್ತವೆ. ಇದರಿಂದ ಗೊರಸು ಪ್ರಾಣಿ ಗುಂಪುಗಳಲ್ಲೂ ಉತ್ತಮವಾದವು ಹಾಗೇ ಉಳಿಯುತ್ತವೆ. ಇದೊಂದು ನೈಸರ್ಗಿಕ ಆಯ್ಕೆಯಾದಂತಾಗಿ ಶಕ್ತಿಯುತವಾದವು ಮಾತ್ರ ಉಳಿಯುವಂತಾಗುತ್ತದೆ. ರಾಯಲ್ ದ್ವೀಪಗಳಲ್ಲಿ ಸುಮಾರು ೩೦-೩೫ ತೋಳಗಳೂ ೧೦೦೦-೧೨೦೦ ಮೂಸ್ ಜಿಂಕೆಗಳೂ ಇವೆ. ಅನೇಕ ವರ್ಷಗಳ ಅವಧಿಯಲ್ಲಿ ಈ ಸಂಖ್ಯೆ ಸ್ವಲ್ಪ ಹೆಚ್ಚು ಕಡಿಮೆಯಾಗುತ್ತಿದೆಯೇ ಹೊರತು, ಒಂದು ಬಗೆಯ ಸಮತೋಲನವಿದ್ದೇ ಇದೆ! ಪ್ರಾಣಿಗಳಲ್ಲಿ ಮನುಷ್ಯರಷ್ಟೇ ಬುದ್ಧಿವಂತಿಕೆಯ ಸಂಘ ರಚನೆಯುಳ್ಳ ಮೃಗಗಳಿವು. ತಮಗಿಂತಲೂ ದಪ್ಪಗಾತ್ರದ ಪ್ರಾಣಿಗಳನ್ನು ಬೇಟೆಯಾಡುವುದು ಅನಿವಾರ್ಯವಾದ್ದರಿಂದ ಒಂಟಿಯಾಗಿ ಅದನ್ನು ನಿರ್ವಹಿಸಲು ಸಾಧ್ಯವಿಲ್ಲ. ಆದ್ದರಿಂದ ಅವು

ಗುಂಪಾಗಿರಬೇಕು. ಗುಂಪಿನಲ್ಲಿ ಒಗ್ಗಟ್ಟು, ನಾಯಕನಿಗೆ ವಿಧೇಯತೆ ಎದ್ದು ಕಾಣುತ್ತದೆ. ಗುಂಪಿನಲ್ಲಿನ ಸಂಖ್ಯೆ ಅಲ್ಲಿ ದೊರಕುವ ಪ್ರಾಣಿ ಸಾಂದ್ರತೆಗನುಗುಣವಾಗಿ ೧೦ ರಿಂದ ೨೪ ರ ವರೆಗಿರಬಹುದು. ಸಂಘಟನೆ, ಸಂಸರ್ಗ, ಕಾರ್ಯ ಹಂಚಿಕೆ ಅಗತ್ಯವಾಗಿರುತ್ತದೆ. ಇವೆಲ್ಲವನ್ನೂ ಸುವ್ಯವಸ್ಥಿತ ರೀತಿಯಲ್ಲಿ ನಾಯಕ ತನ್ನ ಹಿಂಡಿನಲ್ಲಿ ಮಾಡಿರುತ್ತಾನೆ. ನಾಯಕ ತನ್ನ ಬಾಲವನ್ನು ಎತ್ತಿ ಹಿಡಿದು ತಿರುಗಾಡುವ ಅತಿ ಬಲಿಷ್ಠಗಂಡು. ಇತರವೆಲ್ಲವೂ ಅವನನ್ನು ಹಿಂಬಾಲಿಸುವ ಅನುಚರರು. ಗುಂಪಿನಲ್ಲಿ ಯಾವುದಾದರೂ ತಿರುಗಿ

ಬಿದ್ದಲ್ಲಿ ಅದರೊಡನೆ ತೀವ್ರವಾಗಿ ಕಾದಾಡುತ್ತವೆ. ಸೋತವನನ್ನು ನಾಯಕ ಸಾಮಾನ್ಯವಾಗಿ ಸಾಯಿಸುವುದಿಲ್ಲ. ಗುಂಪಿನಿಂದ ಹೊರಗಟ್ಟುತ್ತದೆ. ಇವು "ಒಂಟಿ" ಗಳಾಗಿ ತಿರುಗುತ್ತಾ ಮುಂದೆ ಇತರ ಗುಂಪು ಸೇರಬಹುದು ಅಥವಾ ಗುಂಪು ಕಟ್ಟಬಹುದು.

ಬಹುಶಃ ಉಗ್ರವಾಗಿ ಕಾದಾಡಿದರೂ ಸೋತಾಗ, ಸೋತ ತೋಳ ಮಲಗಿ ಕಾಲು ಮೇಲಕ್ಕೆತ್ತಿ ತನ್ನ ಮೈಯ ದುರ್ಬಲ ಅಂಗಗಳನ್ನು ತೋರಿಸುವುದರಿಂದ ಗೆದ್ದತೋಳ ಅದನ್ನು ಕ್ಷಮಿಸುತ್ತದೆಂದು ತೋರುತ್ತದೆ.

ದಪ್ಪಗಾತ್ರದ ಬಲಿಷ್ಠ ಗಂಡುಗಳು ಮಾತ್ರ ಸಂತಾನೋತ್ಪತ್ತಿಯಲ್ಲಿ ಭಾಗವಹಿಸಬಹುದು. ಎಳೆಯವಕ್ಕೆ, ದುರ್ಬಲವಕ್ಕೆ ಆಸ್ಪದ ಕೊಡುವುದಿಲ್ಲ. ಹಾಗೂ ಮರಿ ನಿಧನ

ಹೆಚ್ಚು. ಇತರ ದಪ್ಪಗಾತ್ರದ ಮಾಂಸಾಹಾರಿಗಳಂತೆಯೇ ಈ ಎರಡು ಅಂಶ, ಅವುಗಳು ಅತಿ ಹೆಚ್ಚಾಗದಿರಲು ಕಾರಣವಾಗಿದೆ. ಇದೊಂದು ನೈಸರ್ಗಿಕ ನಿಯಂತ್ರಣ!

ಜೊತೆಗೂಡಿದ ೯ ವಾರಗಳಲ್ಲಿ ೫ ರಿಂದ ೧೦ ಮರಿಗಳು ಜನಿಸುತ್ತವೆ. ತಂದೆ ಮತ್ತು ಇತರ



ತೋಳಗಳೂ ಮರಿ ಪೋಷಣೆಯಲ್ಲಿ ಸಹಾಯಕವಾಗುತ್ತವೆ. ಹೆಣ್ಣು ತಾನೇ ತೋಡಿದ ಬಿಲ, ಮರ ಪೊಟರೆ, ಅಗಲ ಮಾಡಿದ ನರಿ ಬಿಲ ಮುಂತಾದವನ್ನು ಮರಿ ಹಡೆಯಲು ಬಳಸುತ್ತವೆ. ಹುಟ್ಟಿದಾಗ ನಾಯಿ ಮರಿಗಳಂತೆ ಮರಿ ಅಸಹಾಯಕ. ಕಣ್ಣು ತೆರೆದಿರುವುದಿಲ್ಲ. ಗಂಡು ಅಥವಾ ಇತರವು ಹೆಣ್ಣಿಗೆ ಮತ್ತು ಮರಿಗಳಿಗೆ ಆಹಾರ ಒದಗಿಸುತ್ತವೆ.

ಆಹಾರವನ್ನು ಕಚ್ಚಿಹಿಡಿದು ತರಬಹುದು ಅಥವಾ ನುಂಗಿ, ಮರಿಗಳ ಬಳಿ ವಾಂತಿ ಮಾಡಬಹುದು. ಮರಿಗಳು ಬೇಗ ಬೆಳೆಯುತ್ತವೆ. ೧ ವರ್ಷದಲ್ಲಿ ಅವು ತಮ್ಮ ಪಿತೃಗಳಷ್ಟು ದೊಡ್ಡವಾಗುತ್ತವೆ. ಮೂರು ವರ್ಷಗಳಲ್ಲಿ ಅವು ವಯಸ್ಕವಾಗಿ ಮರಿ ಹಡೆಯಲು ಸಿದ್ಧವಾಗುತ್ತವೆ. ನೈಸರ್ಗಿಕವಾಗಿ ೧೦ ವರ್ಷ ಅವುಗಳ ಆಯಸ್ಸು. ಮುದಿಯಾದಾಗ ಅದನ್ನು ಗುಂಪಿನಿಂದ ಹೊರಗಟ್ಟುತ್ತವೆ. ನಂತರ ಸಾಯುವವರೆಗೂ ಅವು ಒಂಟಿಯಾಗಿರುತ್ತವೆ.

ತೋಳ ಕುಪ್ರಸಿದ್ಧವಾದ ನಾಯಿ ನೆಂಟ. ತೋಳ ಎಂದರೆ ಕ್ರೂರ

ಪ್ರಾಣಿಯೆಂದಾಗಿದೆ. ಬಹುಶಃ ಆಹಾರಕ್ಕಾಗಿ ಸಾಕು ಪ್ರಾಣಿಗಳನ್ನು ಅಂದರೆ ಕುರಿ, ಮೇಕೆ, ದನಕರುಗಳನ್ನು ಕೊಂದು ತಿನ್ನುವುದರಿಂದ ಈ ಹೆಸರು ಬಂದಿರಬೇಕು. ಅದರ ಬಗ್ಗೆ ಅನೇಕ

ದಂತ ಕಥೆಗಳಿವೆ. ಮನುಷ್ಯ ಮಕ್ಕಳನ್ನು ಸಾಕಿದ ಪ್ರಸಂಗಗಳ ವರದಿಯಿದೆ. ರಾಮ್ಯುಲಸ್ ರೀಮಸ್‌ರ ಕಥೆ ಇಂತಹದೊಂದು. ಭಾರತ "ರಾಮು" ವಿನ ಕಥೆ ಇನ್ನೊಂದು. ಆದರೆ ಸಾಮಾನ್ಯವಾಗಿ ಅವು ಮನುಷ್ಯರ ಮೇಲೆರಗುವುದಿಲ್ಲ. ಹುಚ್ಚು ಹಿಡಿದಾಗ ಮಾತ್ರ ಹಾಗೆ ಮಾಡುತ್ತವೆ. ಸುಮಾರು ೩೦೦ ವರ್ಷಗಳ ಹಿಂದೆ ಇವುಗಳನ್ನು ಹಿಡಿದು, ಸುಡುತ್ತಿದ್ದರು. ಸೈತಾನನ ಅನುಯಾಯಿಗಳು ತೋಳ ರೂಪಧಾರಿಗಳೆಂದು ಕೆಲವೆಡೆಗಳಲ್ಲಿ ನಂಬಲಾಗಿದೆ. ಆದರೆ ಅವುಗಳನ್ನು ಸುಲಭವಾಗಿ ಪಳಗಿಸಬಹುದು-ಮರಿಗಳನ್ನು

ಸಮರ್ಪಕವಾಗಿ ಈಗ ಅನೇಕ ಕಡೆ ಸಾಕುತ್ತಿದ್ದಾರೆ. ಆದರೆ ಬೆಳೆದಂತೆಲ್ಲಾ ಅವು ಸ್ವಲ್ಪ ವಿನಾಶಕಾರಿಗಳಾಗುತ್ತವೆ. ಮನೆಯಲ್ಲಿನ ಸಾಮಗ್ರಿಗಳನ್ನು ನೂಕಿ ಹೊಡೆಯುವುದೂ, ಬಟ್ಟೆ ಮುಂತಾದವನ್ನು ಹರಿಯುವುದೂ ಸಾಮಾನ್ಯ. ನಾಯಿಗಳಂತೆ ಶಾಂತವಾಗಿರುವುದಿಲ್ಲ. ಒಡೆಯನನ್ನು ತನ್ನ ಗುಂಪಿನ ನಾಯಕನನ್ನಾಗಿ ಗುರುತಿಸಿಕೊಳ್ಳುವುದರಿಂದ,

ಹೊರಗಿನಿಂದ ಬಂದವರನ್ನು ಇತರ ಗುಂಪಿನ ಶತ್ರುಗಳೆಂದು ತಿಳಿದು ಮೇಲೆರಗಬಹುದು. ಇವುಗಳಿಂದ ಕೆಲವು ನೈಸರ್ಗಿಕ ಅನುಕೂಲತೆಗಳೂ ಇವೆ. ಸಸ್ಯಾಹಾರ ಪ್ರಾಣಿಗಳು ಅತಿ ಹೆಚ್ಚಾಗಿ ಹೆಚ್ಚದಂತೆ ನಿಯಂತ್ರಣಗೊಳಿಸುವುದರಿಂದ ಹುಲ್ಲುಗಾವಲು ಕಾಡು ಹೆಚ್ಚಾಗಿ ಮೇದು ನಾಶಗೊಳ್ಳುವುದಿಲ್ಲ. ಅವು ಕೊಂದು ತಿಂದನಂತರ ಉಳಿದ ಪ್ರಾಣಿ ದೇಹ ಭಾಗ ಅನೇಕ ಇತರ ಪ್ರಾಣಿಗಳಿಗೆ, ನರಿ, ಕತ್ತೇಕಿರುಬ, ರಣಹದ್ದು ಮುಂತಾದವುಗಳಿಗೆ

ಜೀವನೋಪಾಯ ಮಾರ್ಗವಾಗುತ್ತದೆ. ಅವುಗಳಿಗೆ ಸಮರ್ಪಕ ಆಹಾರ ದೊರಕುವಲ್ಲಿ ಸಾಕುಪ್ರಾಣಿಗಳನ್ನು ಅವು ಕೊಲ್ಲುವುದಿಲ್ಲ. ತೊಂದರೆ ಮಾಡುವುದಿಲ್ಲ.

ಇವುಗಳಲ್ಲಿ ಅನೇಕವು ಕ್ಯಾನಿಸ್ ಲೂಪಸ್ ಪ್ರಭೇದಕ್ಕೆ ಸೇರಿದವು. ವಿಧಗಳ ಹೆಸರು ಬೇರೆ ಬೇರೆ ಇದೆ. ವ್ಯತ್ಯಾಸ ಗಾತ್ರ ಮತ್ತು ವರ್ಣದಲ್ಲಿ ಮಾತ್ರ.



೧. ಕ್ಯಾನಿಸ್ ಲೂಪಸ್ ಹೋಡೋ ಫೈಲಾಕ್ಸ್ ಜಪಾನ್ ತೋಳ

೨. ಕ್ಯಾನಿಸ್ ಲೂಪಸ್ ನ್ಯೂಬಿಲಸ್ ಬಫೇಲೋ ತೋಳ

೩. ಕ್ಯಾನಿಸ್ ಲೂಪಸ್ ಆಕ್ಸಿಡೆಂಟಾಲಿಸ್ ಮೆಕಂಜೀ ಕಣಿವೆಯ ತೋಳ

೪. ಕ್ಯಾನಿಸ್ ಲೂಪಸ್ ಆಲ್‌ಸೆಸ್ ಆಲಾಸ್ಕಾ ಶೀತವಲಯ ತೋಳ

೫. ಕ್ಯಾನಿಸ್ ಲೂಪಸ್ ಲೊಪಸ್ ಯೂರೋಪಿನ ತೋಳ

೬. ಕ್ಯಾನಿಸ್ ಲೂಪಸ್ ಚಾಂಕೋ ಮಂಗೋಲಿಯಾ ತೋಳ

೭. ಕ್ಯಾನಿಸ್ ಲೂಪಸ್ ಪಾಲಿಪೆನ್ ಭಾರತದ ತೋಳ

ಮೇನ್ಡ್ ಉಲ್ಫ್

ದಕ್ಷಿಣ ಅಮೆರಿಕಾದ ವಿಚಿತ್ರ ಪ್ರಾಣಿಯಿದು. ಇದಕ್ಕೆ ಮೇನ್ಡ್ ಉಲ್ಫ್ ಎಂಬ ಹೆಸರಿದ್ದರೂ ಅದು ತೋಳದ ಸಮೀಪ ಬಂಧುವಲ್ಲ. ಪಕ್ಕದಲ್ಲಿ ಕಂದು, ಕೆಂಪು ಅಥವಾ ಕೆಂಪು ಹಳದಿ ಮೈಬಣ್ಣ. ಕತ್ತು ಬಿಳುಪು, ಕತ್ತಿನ ತಳಭಾಗದಲ್ಲಿ ಒಂದು ಕಪ್ಪು ಪಟ್ಟೆಯಿದೆ. ಕಾಲುಗಳಲ್ಲೂ ಪಾದಗಳ ಬಳಿ ಬೂಟು ಧರಿಸಿದಂತೆ ಕಪ್ಪು ವರ್ಣವಿದೆ. ಬೆನ್ನಿನ
ಮೇಲೆ ಉದ್ದಕ್ಕೂ ಎದ್ದು ನಿಂತಿರುವಂತಹ ಗಡಸು ಕೇಸರವಿದೆ. ಇದರ ದವಡೆ ಹಲ್ಲುಗಳು ಅಗಲವಾಗಿ ಅವು ಹೆಚ್ಚಾಗಿ ಸಸ್ಯಾಹಾರಿಗಳೆಂಬುದನ್ನು ಸೂಚಿಸುತ್ತವೆ. ನೀಳಗಣೆ
ಕಾಲುಗಳೇ ಅದರ ಇನ್ನೊಂದು ವೈಶಿಷ್ಟ್ಯ. ದೇಹಕ್ಕೆ ಅಷ್ಟು ನೀಳ ಕಾಲುಗಳಿರುವುದು ಪ್ರಾಣಿ ವರ್ಗದಲ್ಲಿ ಇದೊಂದಕ್ಕೆ. ಹುಲ್ಲುಗಾವಲುಗಳಲ್ಲಿರುವುದರಿಂದ ಬಹುಶಃ ಎತ್ತರ

ಹುಲ್ಲಿನ ಮೇಲೆ ದೃಷ್ಟಿಸಿ ನೋಡಲು ಇದು ಸಹಾಯಕವಾಗಿದೆ. ಮಧ್ಯ ಬ್ರೆಸಿಲ್‌ನಿಂದ ಉತ್ತರ ಅರ್ಜೆಂಟೈನಾ ವರೆಗಿನ ಸವನ್ನಾ ಹುಲ್ಲುಗಾವಲು ಮತ್ತು ಪೊದರು ಪ್ರದೇಶಗಳಲ್ಲಿರುತ್ತವೆ. ಈಗ ಅತಿ ಸ್ವಲ್ಪವೇ ಉಳಿದಿದ್ದು ನಿರ್ನಾಮವಾಗುವ ಸ್ಥಿತಿಯಲ್ಲಿದೆ. ನೀಳಕಾಲಿನ ಈ ಪ್ರಾಣಿಗಳು ತೋಳದಷ್ಟೇ ದಪ್ಪವಾಗಿದ್ದರೂ ನೀಳ ಕಿವಿ ಮತ್ತು ಮುಖ ನರಿಯಂತಿದೆ ಒಂಟಿ ಜೀವಿ. ಪರ್ವಕಾಲದಲ್ಲಿ ಮಾತ್ರ ಜೊತೆಗೂಡುತ್ತವೆ. ಆಗಾಗ್ಗೆ ನಿಂತು, ವಾಸನೆ ಹಿಡಿಯುತ್ತಾ, ಕಿವಿ ಅಲುಗಾಡಿಸುತ್ತಾ, ದಪ್ಪದಾಪು ಹೆಜ್ಜೆ ಹಾಕುತ್ತಾ ಚಲಿಸುತ್ತವೆ. ಆಹಾರ ಕಂಡದ್ದೆ ಹಠಾತ್ತಾಗಿ ಕಚ್ಚಿಹಿಡಿದು ತಿಂದು ಮುಂದೆ ಸಾಗುತ್ತದೆ. ಕಾಡಿನಲ್ಲಿರುವ ಗಿನೀ ಪಿಗ್, ಸಣ್ಣ ಸಸ್ತನಿಗಳು, ನೆಲ ಪಕ್ಷಿಗಳು ಮತ್ತು ವಿವಿಧ ಹಣ್ಣು ಗೆಡ್ಡೆಗಳು ಅದರ ಆಹಾರ. ಬಸವನ ಹುಳುಗಳನ್ನೂ ತಿನ್ನುತ್ತವೆ. ಓತಿ, ಕಪ್ಪೆ ಮತ್ತು ಮಿಡತೆಗಳೂ ಮುಖ್ಯ ಆಹಾರಗಳೇ. ನಡೆಯುವಾಗ ಪಕ್ಕದಿಂದ ಪಕ್ಕಕ್ಕೆ ಹೊರಳಾಡಿ ವಾಲಿದಂತೆ ನಡೆಯುತ್ತವೆ. ಕಿವಿಯನ್ನು ನಿಮಿರಿಸಿ ಮುಂದಕ್ಕೆ ವಾಲಿರುವಂತೆ ಇಟ್ಟು ಚಲಿಸುತ್ತವೆ. ಓಡುವಾಗ ಅಡ್ಡವಿರುವ ಸಣ್ಣ ಪೊದರುಗಳನ್ನು ನೆಗೆದು ದಾಟುತ್ತವೆ. ಕಡಿದಾದ ಪ್ರದೇಶವನ್ನೂ ಸುಲಭವಾಗಿ ಹತ್ತಬಲ್ಲವು. ಆದರೆ



ಅದರ ನೀಳಕಾಲುಗಳಿಂದಾಗಿ ಇಳಿಜಾರಿನಲ್ಲಿ ಇಳಿಯುವುದು ಕಷ್ಟ. ಸಂಭೋಗ ನಾಯಿಗಳಂತೆಯೇ. ೬೫-೭೦ ದಿನಗಳ ಗರ್ಭಾವಧಿಯ ನಂತರ ಅತಿ ಸಣ್ಣ ಗಾತ್ರದ

(೧ ಪೌಂಡು

ತೂಕ) ೪-೫ ಮರಿಗಳು ಹುಟ್ಟುತ್ತವೆ.

ಮರಿಗಳು ಹುಟ್ಟಿದಾಗ ದಟ್ಟ ಬೂದು ಅಥವಾ ಕಪ್ಪು-ಬೂದು ವರ್ಣವಿರುತ್ತದೆ. ಕಾಲುಗಳೂ ಇತರ ತೋಳಗಳಂತೆ ಸಣ್ಣಗಾಗಿಯೇ ಇರುತ್ತದೆ. ಅವು ಬೆಳೆದಂತೆ ಕ್ರಮೇಣವಾಗಿ ಕಾಲುಗಳೂ ನೀಳವಾಗಿ ಬೆಳೆಯುತ್ತವೆ. ತೋಳಗಳಂತೆ ಇವು ವೇಗವಾಗಿ ಓಡಿ ಬೇಟೆಯಾಡಲಾರವು. ನೀಳ ಕಾಲುಗಳಿಂದಾಗಿ ಬಹುಬೇಗ ಆಯಾಸಗೊಳ್ಳುತ್ತವೆ. ಇವು ಹುಲ್ಲುಗಾವಲಿನ ಅಲೆಮಾರಿಗಳು. ಇವು ಮನುಷ್ಯ ನಿವಾಸಗಳಿಂದ

ದೂರವಿರುತ್ತವೆ. ಮನುಷ್ಯ ಮತ್ತು ಕಾಡುಗಿಚ್ಚುಗಳೆರಡೇ ಅದರ ಪರಮ ಶತ್ರುಗಳು. ಹಲವಾರು
ಮೃಗಾಲಯಗಳಲ್ಲಿ ಅವು ಈಗ ವೃದ್ಧಿಗೊಳ್ಳುತ್ತಿರುವುದು ಒಂದು ತೃಪ್ತಿಕರ ಸಂಗತಿ. ಹಾಗೆ ವೃದ್ಧಿಮಾಡಿ ಅವುಗಳನ್ನು ಸೂಕ್ತವಾದ ಪ್ರದೇಶದಲ್ಲಿ ಬಿಟ್ಟು ಹೆಚ್ಚಿಸಬಹುದು.

ಗುಳ್ಳೇನರಿಗಳು

ಇವು ಹಿಂದೆ ವಿವಿಧ ಜಾತಿಗೆ ಸೇರಿದವೆಂದು ವಿವರಿಸಲಾಗಿದ್ದು, ಈಗ ಎಲ್ಲಾ ಗುಳ್ಳೇನರಿಗಳೂ ಒಂದೇ ಜಾತಿಯ ವಿವಿಧ ಪ್ರಬೇಧಗಳೆಂದು ಪರಿಗಣಿಸಲಾಗಿದೆ. ತೋಳಗಳಂತೆಯೇ ಇವುಗಳ ಕಣ್ಣು ಪಾಪೆ ದುಂಡು. ಅವುಗಳ ಚರ್ಯೆ ಮತ್ತು ದೇಹ ರಚನೆಯಲ್ಲೂ ತೋಳಗಳನ್ನೇ ಹೋಲುತ್ತವೆ.

ಸುವರ್ಣ ವರ್ಣದ ಗುಳ್ಳೇನರಿಗಳು: ತೋಳಗಳನ್ನು
ಅತಿ ಹೆಚ್ಚಾಗಿ ಹೋಲುವುವು. ಮೈದಾನ ಪ್ರದೇಶದವುಗಳಲ್ಲಿ ತುಕ್ಕು ಅಥವಾ ಸುವರ್ಣ ಬಣ್ಣದ ಹೊಳಪು ಕೂದಲ ಹೊದಿಕೆ ಇದೆ. ಬೆಟ್ಟಗಾಡು ಮತ್ತು ಇತರ ಚಳಿ ಪ್ರದೇಶದವುಗಳಲ್ಲಿ ಬೂದು ವರ್ಣ ಹೆಚ್ಚು. ಮುಸುಡು, ಕಣ್ಣುಸುತ್ತಲೂ ಮತ್ತು ಹಣೆ ಕಾವಿ ವರ್ಣ. ಕಣ್ಣಿನ ಮೇಲ್ಭಾಗದಲ್ಲಿ ಕಪ್ಪು ಪಟ್ಟಿಯಿರಬಹುದು. ತುಟಿ, ತಳಕೆನ್ನೆ, ಗಲ್ಲ, ಕತ್ತಿನ ತಳಭಾಗಗಳು ಮಾಸಲು ಬಿಳುಪು. ಅದರ ಕಾಲುಗಳು ತೋಳಗಳಿಗಿಂತ ಚಿಕ್ಕಗಾತ್ರದವು ಹಾಗೂ ಮುಸುಡು ಇನ್ನೂ ನೀಳ ಮತ್ತು ಮೊನಚು.

X